www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–06 ಜೂನ್ 2015
Volume : IX Issue : 06 June 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಪ್ರಾರ್ಥನಾ ಮನವಿಗಳು
3. ಪವಿತ್ರ ಜೀವಿತದ ರಹಸ್ಯ !
4. ವಿಶ್ವಾಸದಮನೆಗೆ ಬೇಟಿ ನೀಡಿದವರ ಅನಿಸಿಕೆಗಳು :
5. ಸ್ಥಳೀಯ ಮತ್ತು ವಿದೇಶ ಸುದ್ಧಿ
6. ಆರೋಗ್ಯ ಸ್ವರ
7. ಡಿಜಿಎಮ್ ಬೇತೇಲ್ ಅಂಕಣ
8. ನೀತಿವಂತನ ಆಶೀರ್ವಾದಗಳು
9. ಅವಿಧೇಯತೆ
10. ಮಹಿಳೆಯರ ಸ್ವರ
11. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸು ಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರಿಯ ಸಹೋದರ/ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು.

ಕರ್ತನಾದ ಯೇಸುಕ್ರಿಸ್ತನು ಈ ವರ್ಷದ ಕಳೆದ ಎಲ್ಲಾ ತಿಂಗಳುಗಳಲ್ಲಿಯೂ ನಮ್ಮ ಜೊತೆಯಲ್ಲಿದ್ದುಕೊಂಡು ಅದ್ಭುತವಾದ ರೀತಿಯಲ್ಲಿ ನಡೆಸಿರುತ್ತಾನೆ. ಇಂದು ಲೋಕದಲ್ಲಿ ನಡೆಯುವ ಕೆಲವು ಸೂಚನೆಗಳ ಮೂಲಕ ತಿಳಿದುಕೊಳ್ಳುವುದಕ್ಕೆ ಸಾಧ್ಯ ಕರ್ತನಾದ ಯೇಸುಕ್ರಿಸ್ತನ ಬರೋಣವು ಅತಿ ಸಮೀಪವಾಗಿದೆ. ಅದಕ್ಕಾಗಿ ನಾವೆಲ್ಲರೂ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ನಮ್ಮನ್ನೇ ಸಿದ್ಧಪಡಿಸಬೇಕು ಮತ್ತು ಅನೇಕರನ್ನು ಸಿದ್ಧಪಡಿಸಬೇಕಾಗಿದೆ. ನಿನ್ನ ಕರ್ತನ ಬರುವಿಕೆಗೆ ನಿನ್ನನ್ನೇ ಸಿದ್ಧಪಡಿಸಿಕೋ (ಆಮೋ. 4:12). ಯೆಶಾ. 38:1–8 ವಾಕ್ಯ ಓದುವುದಾದರೆ ಯೆಶಾಯನಿಗೆ ದೇವರು ಹೇಳಿದನು ನೀನು ಸಾಯಬೇಕಾಗಿದೆ ಆದಕಾರಣ ನಿನ್ನ ಮನೆಯನ್ನು ಸಿದ್ಧಪಡಿಸು ಎಂಬುದಾಗಿ. ನಮ್ಮ ರಹಸ್ಯ ಮತ್ತು ಬಹಿರಂಗ ಪಾಪಗಳಿಗೆ ಮಾನಸಾಂತರಪಟ್ಟು ಕರ್ತನೊಂದಿಗೆ ಅನ್ಯೋನ್ಯವಾಗಿ ನಡೆದು ಪರಿಶುದ್ಧ ಜೀವಿತವನ್ನು ಜೀವಿಸಬೇಕು. 1 ಪೇತ್ರ. 1:15–16 ಹೇಳುತ್ತದೆ, ನಿನ್ನ ದೇವರು ಪರಿಶುದ್ಧನಾಗಿರುವ ಪ್ರಕಾರ ನೀನು ಪರಿಶುದ್ಧನಾಗಿರಬೇಕು. ಇಂದು ಭಾರತ ದೇಶದಲ್ಲಿ ಕರ್ತನಾದ ಯೇಸುಕಿಸ್ತನನ್ನು ಅರಿಯದಂತಹ ಅನೇಕ ಪಟ್ಟಣಗಳು, ಹಳ್ಳಿಗಳು ಇವೆ. ಕರ್ತನ ಕುರಿತು ಅರಿಯದವರಿಗೆ ಕರ್ತನ ಕುರಿತು ತಿಳಿಸಿ ಅದಷ್ಟು ಜನರನ್ನು ಕರ್ತನ ಬಳಿಗೆ ನಡೆಸಿ ರಕ್ಷಣೆ ಹೊಂದುವಂತೆ ನಾವು ಮಾಡಬೇಕು. ಕರ್ತನ ಹೃದಯದ ಮಿಡಿತವನ್ನು ನಾವೆಲ್ಲರೂ ಅರಿತುಕೊಳ್ಳಬೇಕು. ಯೆಶಾ. 6:8 ರಲ್ಲಿ ಪ್ರವಾದಿಯಾದ ಯೆಶಾಯನಿಗೆ ಕರ್ತನು ಹೇಳಿದನು ನಮಗಾಗಿ ಹೋಗುವವರು ಯಾರು? ಇಂದು ಕರ್ತನು ನನ್ನನ್ನು ಮತ್ತು ನಿನ್ನನ್ನು ನೋಡಿ ಹೇಳುತ್ತಿದ್ದಾನೆ, ನಮಗಾಗಿ ನೀನು ಹೋಗಲು ಸಿದ್ಧನಾಗಿದ್ದೀಯೋ? ಕರ್ತನು ನಿನ್ನನ್ನು ಬಲಪಡಿಸಿ ನಡೆಸಲಿ. ಯೋಹಾ. 12:26 ರಲ್ಲಿ ನನ್ನ ಸೇವೆಯನ್ನು ಯಾರು ಮಾಡುತ್ತಾರೋ ಅವರಿಗೆ ನನ್ನ ತಂದೆಯು ಬಹುಮಾನ ಕೊಡುತ್ತಾನೆಂಬುದಾಗಿ ಕರ್ತನಾದ ಯೇಸುಕ್ರಿಸ್ತನು ಹೇಳುತ್ತಾನೆ. ಕರ್ತನು ನಿಮ್ಮನ್ನು ಈ ಮಾತುಗಳ ಮೂಲಕ ಆಶೀರ್ವದಿಸಿ, ಪ್ರೋತ್ಸಾಹಿಸಿ, ಬಲಪಡಿಸಿ ನಡೆಸಲಿ ಆಮೆನ್.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) ಎಫೆ. 4:14–16 ನಾವು ಇನ್ನು ಮೇಲೆ ಮಕ್ಕಳಾಗಿರಬಾರದು ಕಾರಣ ಮಕ್ಕಳು ಯಾರನ್ನು ಬೇಕಾದರೂ ನಂಬುತ್ತಾರೆ.

2) ದುರ್ಬೋಧಕರು ಲೋಕದಲ್ಲಿ ತುಂಬಿದ್ದಾರೆ. ಅವರು ಉಪದೇಶಿಸುವ ದೇವರ ವಾಕ್ಯವನ್ನು ಸರಿಯಾ, ತಪ್ಪಾ ಎಂಬ ವಿವೇಚನೆ ನಮಗೆ ಇರಬೇಕು. **'ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣ ವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರ ಗ್ರಂಥಗಳನ್ನು ಶೋಧಿಸುತ್ತಿದ್ದರು'** ಅ.ಕೃ. 17:11 .

3) ದುರ್ಜನರು ಈ ಲೋಕದಲ್ಲಿ ಒಳ್ಳೆಯವರ ಹಾಗೆ ವೇಷ ಹಾಕಿದ ಎಷ್ಟು ದುಷ್ಟ ಜನರಿದ್ದಾರೆ. ಮಕ್ಕಳು ಯಾರನ್ನು ಬೇಕಾದರೂ ನಂಬುತ್ತಾರೆ ಆದರೆ ಜ್ಞಾನಿಗಳು ಮಾತುಗಳಿಗೆ ಮರುಳಾಗದೇ ವಿವೇಚನೆ ಮಾಡುತ್ತಾರೆ. ದೇವರ ವಾಕ್ಯದ ಜ್ಞಾನದಲ್ಲಿ ನಾವು ಬೆಳೆದರೆ ದುರ್ಜನರನ್ನು ಕಂಡು ಹಿಡಿಯಬಹುದು. ಇಂದು ಲೋಕದಲ್ಲಿ ದೇವರ ಸೇವಕರ ಹಾಗೆ ವೇಷ ಹಾಕಿಕೊಂಡು ತಪ್ಪಾದ ಕೆಲಸ ಮಾಡುವಂತಹ ಎಷ್ಟೋ ಜನರನ್ನು ನಾವು ಕಾಣಬಹುದು. ಇದರಿಂದಾಗಿ ಒಳ್ಳೇಯ ದೇವ ಸೇವಕರ ಹೆಸರು ಕೂಡ ಕೆಟ್ಟು ಹೋಗಿದೆ.

4) **ನಾನಾ ವಿಧವಾದ ಉಪದೇಶಗಳಿಗೆ ಸಿಕ್ಕಿಕೊಳ್ಳಬಾರದು :– 'ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರ ಮಾಡುವವರಾಗಿರಿ'** ಕೊಲೊ. 2:6–7. **'ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ, ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯವನ್ನು ಮೋಸಗೊಳಿಸುತ್ತಾರೆ. ನಿಮ್ಮ ವಿಧೇಯತ್ವವು ಎಲ್ಲರಿಗೂ ಪ್ರಸಿದ್ಧವಾಗಿರುವದರಿಂದ ಇದನ್ನು ಬರೆದಿದ್ದೇನೆ; ನಿಮ್ಮ ವಿಷಯದಲ್ಲಿ ಆನಂದ ಪಡುತ್ತೇನೆ. ನೀವು ಒಳ್ಳೆತನದ ವಿಷಯದಲ್ಲಿ ಜಾಣರೂ ಕೆಟ್ಟತನದ ವಿಷಯದಲ್ಲಿ ಕಳಂಕವಿಲ್ಲದವರೂ ಆಗಿರಬೇಕೆಂದು ಅಪೇಕ್ಷಿಸುತ್ತೇನೆ. ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿ ಬಿಡುವನು. ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ'** ರೋಮಾ.16:17–20. **'ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ನಿಮ್ಮ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ. ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು ಅವು ಹಿಂಡನ್ನು ಕನಿಕರಿಸುವುದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು, ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು'** ಅ.ಕೃ. 20:28–30.

ಇಂದು ನಾನಾ ವಿಧವಾದ ಉಪದೇಶಗಳಿಂದ ನಮ್ಮನ್ನೇ ನಾವು ರಕ್ಷಿಸಿಕೊಳ್ಳಬೇಕಾದರೆ ಒಂದೇ ಒಂದು ಮಾರ್ಗ ದೇವರ ವಾಕ್ಯವನ್ನು ಚೆನ್ನಾಗಿ ಕಲಿಯಬೇಕು.

5) **ಪ್ರೀತಿಯಿಂದ ಸತ್ಯವನ್ನು ಅನುಸರಿಸಬೇಕು :–** ಯೋಹಾ. 8:31–32 ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು ಎಂದು ಹೇಳಿದನು. ಒಂದು ಚಿಕ್ಕ ಮಗುವಿಗೆ ಯಾವುದೇ ವಿಚಾರದಲ್ಲಿ ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ ಆದರೆ ಬೆಳೆದಂತಹ ವ್ಯಕ್ತಿಗೆ ಅದು ಸಾಧ್ಯ. ವಾಕ್ಯದ ಜ್ಞಾನದಲ್ಲಿ ಬೆಳೆದಂತಹ ವ್ಯಕ್ತಿ ನಂಬಿಕೆಗಾಗಿ, ನಿತ್ಯತ್ವಕ್ಕಾಗಿ, ಯೇಸುವಿಗಾಗಿ ಯಾವ ತೀರ್ಮಾನವನ್ನು ಬೇಕಾದರೂ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ. 2 ಕೊರಿ. 5:14 ರಲ್ಲಿ ಪೌಲನು ಕ್ರಿಸ್ತನ ಪ್ರೀತಿಯು ನಮ್ಮನ್ನು ಒತ್ತಾಯಪಡಿಸುತ್ತದೆ; ಎಂದು ಹೇಳುತ್ತಿದ್ದಾನೆ, ನೀವು ಆತ್ಮೀಕ ಸತ್ಯ ತಿಳಿದ ನಂತರ ಸತ್ಯಕ್ಕಾಗಿ ನಿಂತು ಕ್ರಿಸ್ತನಿಗಾಗಿ ಜೀವಿಸಲು ಸರಿಯಾದ ತೀರ್ಮಾನವನ್ನು

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).

ತೆಗೆದುಕೊಳ್ಳಲು ಹಿಂತೆಗೆಯಬಾರದು ಅದರಿಂದ ಕೆಲವು ನಷ್ಟಗಳು, ನೋವುಗಳು ಸಂಭವಿಸಬಹುದು. ನೀವು ಕೂಸುಗಳಲ್ಲ, ನೀವು ಆತ್ಮೀಕ ಧ್ಯಾನದಲ್ಲಿ ಬೆಳೆದವರು ಪ್ರತಿಯೊಂದು ಸಮಸ್ಯೆಯನ್ನು ಎದುರಿಸಲು ಸಿದ್ಧರಿರಬೇಕು, ನೀರಿನಲ್ಲಿ ಮುಳುಗಿ ತೆಗೆದುಕೊಳ್ಳುವ ದೀಕ್ಷಾಸ್ನಾನ, ರಕ್ಷಣೆ ಹೊಂದಿದ ಗುಂಪಿನೊಂದಿಗೆ ಸೇರಿ ಆರಾಧಿಸುವಂತದ್ದು, ಕೆಲವೊಂದು ದೇವರಿಗೆ ಇಷ್ಟವಿಲ್ಲದ ಸಂಬಂಧಗಳನ್ನು ಮುರಿಯುವದು, ದೇವರಿಗೆ ಇಷ್ಟವಿಲ್ಲದ ಸಂಗತಿಗಳನ್ನು ಮಾಡುವುದನ್ನು ನೀವು ಬಿಡುವಾಗ ಲೋಕ ನಿಮಗೆ ಎದುರಾಗಿ ಬರಬಹುದು ಆದರೆ ನೆನಪಿನಲ್ಲಿಡಿ ಕರ್ತನಾದ ಯೇಸುಕ್ರಿಸ್ತನು ನಿಮ್ಮ ಜೊತೆಯಲ್ಲಿದ್ದಾನೆ. ಯುಗದ ಸಮಾಪ್ತಿಯವರೆಗೂ ನಾನು ನಿಮ್ಮ ಜೊತೆಯಲ್ಲಿರುತ್ತೇನೆ (ಮತ್ತಾ. 28:20).

6) **ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು** :ಅಂದರೆ ಕ್ರಿಸ್ತನ ಅನ್ಯೋನ್ಯತೆಯ ಪ್ರತಿಯೊಂದು ಸಂಗತಿಗಳನ್ನು ನಾವು ಮಾಡಬೇಕು. **'ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವುದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು'** ಅ.ಕೃ. 2:42.

7) **ದೇಹವೆಲ್ಲಾ ಆತನ ದೊರೆತನದಲ್ಲಿರಬೇಕು** :– ದೇಹ ಅಂದರೆ ಸಭೆಯಾಗಿದೆ ಆತನು ಸಭೆಯನ್ನು, ನಮ್ಮನ್ನು ಆಳಬೇಕು. ಕ್ರಿಸ್ತನು ನಮ್ಮ ಜೀವಿತದ ಪ್ರತಿಯೊಂದು ಭಾಗಗಳನ್ನು ಆಳಲು ನಾವು ಬಿಟ್ಟು ಕೊಡಬೇಕು ಆಗ ಮಾತ್ರ ನಮ್ಮ ಒಂದು ಆತ್ಮೀಕ ಬೆಳವಣಿಗೆಯಾಗಲು ಸಾಧ್ಯ.

8) ಇಬ್ರಿ. 5:11–14 ಮಂದ ಕಿವಿಗಳು ಅಂದರೆ ಮಕ್ಕಳಿಗೆ ಅರ್ಥವಾಗುವುದಿಲ್ಲ

9) ನೀತಿ ವಾಕ್ಯದಲ್ಲಿ ಅನುಭವವಿಲ್ಲದವರು

10) ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಬೇದ ತಿಳಿಯದ್ದು ಮಗು

11) ವಿಸರ್ಜಿಸಬೇಕಾದದ್ದನ್ನು ವಿಸರ್ಜಿಸಬೇಕು. (1 ಪೇತ್ರ. 2:1–2).

12) ವ್ಯತ್ಯಾಸ ಬೋಧನೆಗಳು (ಅ.ಕೃ. 20:28–30).

13) ಕ್ರೂರವಾದ ತೋಳಗಳು ಅಂದರೆ ಸಭೆಯ ಬಗ್ಗೆ ಕಾಳಜಿ ಇಲ್ಲದವರು, ಆತ್ಮಗಳ ಭಾರ ಇಲ್ಲದವರು ಸಭೆಯನ್ನು ಹಾಳು ಮಾಡುವರು.

14) ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಬೇದ ಮತ್ತು ವಿಘ್ನ ಮಾಡುವವರು ಸಭೆಯಲ್ಲಿ ಇದ್ದಾರೆ (ರೋಮ. 16:17–20).

3) **"ಆದರೆ ಕ್ರೈಸ್ತ ಸಹೋದರನೆನಿಸಿಕೊಂಡವನು ಜಾರನಾದರೂ ಲೋಭಿಯಾದರೂ ವಿಗ್ರಹಾರಾಧಕನಾದರೂ ಬೈಯುವವನಾದರೂ ಕುಡಿಕನಾದರೂ ಸುಲುಕೊಳ್ಳುವವನಾದರೂ ಆಗಿದ್ದ ಪಕ್ಷದಲ್ಲಿ ಅವನ ಸಹವಾಸ ಮಾಡಬಾರದು, ಅಂಥವನ ಸಂಗಡ ಊಟಮಾಡಲೂ ಬಾರದು ಎಂದು ಬರೆದಿದ್ದೆನು"** (1 ಕೊರಿ. 5:11). ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಕ್ರೈಸ್ತ ಹೆಸರು ಇಟ್ಟು ಕುತ್ತಿಗೆಗೆ ಶಿಲುಬೆ ಹಾಕಿದ ಕೂಡಲೆ ಒಬ್ಬನು ಕ್ರೈಸ್ತನಾಗಲ್ಲ, ಕ್ರೈಸ್ತ ಎಂದು ನಮ್ಮನ್ನು ನಾವು ಕರೆಯಬೇಕಾದರೆ ಕರ್ತನಾದ ಯೇಸುಕ್ರಿಸ್ತನ ಗುಣಗಳು ನಮ್ಮಲ್ಲಿರಬೇಕು. ಮೇಲಿನ ವಾಕ್ಯದಲ್ಲಿ 6 ಸಂಗತಿಗಳನ್ನು ಕೊಡಲಾಗಿದೆ.

1) **ಜಾರತನ :–** ಜಾರತನ ಅಂದರೆ ಮದುವೆಯ ಹೊರಗಿನ ಲೈಂಗಿಕವಾದ ಸಂಬಂಧ ನನ್ನ ಜೀವಿತದಲ್ಲಿ ಮದುವೆಯ ಹೊರಗೆ ಒಟ್ಟಾಗಿ ಜೀವಿಸುವ ಸ್ತ್ರೀ ಪುರುಷರನ್ನು ಕಂಡಿದ್ದೇನೆ. ಅವರು ಕ್ರೈಸ್ತರು ಎಂದು ಹೇಳುತ್ತಾರೆ, ಇದು ದೇವರ ವಾಕ್ಯಕ್ಕೆ ವಿರುದ್ಧವಾದ ಸಂಗತಿಯಾಗಿದೆ. ದೇವರಿಂದ ಕೊಡಲ್ಪಟ್ಟ 7ನೇ ಆಜ್ಞೆಯು ವ್ಯಭಿಚಾರ ಮಾಡಬಾರದೆಂದೂ, 10ನೆಯ ಆಜ್ಞೆಯು ಮತ್ತೊಬ್ಬನ ಹೆಂಡತಿಯನ್ನು ಆಶಿಸಬಾರದು ಎಂದು ತಿಳಿಸುತ್ತದೆ. ಅನೇಕರು ಇಂದು ಈ ಆಜ್ಞೆಗಳಿಗೆ ವಿರುದ್ಧವಾಗಿ ಜೀವಿಸುವುದನ್ನು ಕಾಣಬಹುದು ಇದಕ್ಕೆ ಕಾರಣ ದೇವರ ವಾಕ್ಯದ ಅಜ್ಞಾನ ಮತ್ತು ದೇವರ ಭಯವಿಲ್ಲದಿರುವುದು.

2) **ಲೋಭ :–** ಲೋಭವು ವಿಗ್ರಹಾರಾಧನೆಗೆ ಸಮವಾಗಿದೆ ಎಂದು ಸತ್ಯವೇದ ಹೇಳುತ್ತದೆ "ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ. ಜಾರತ್ವ ಬಂಡುತನ ಕಾಮಾಭಿಲಾಷೆ ದುರಾಶೆ ವಿಗ್ರಹಾರಾಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ" (ಕೊಲೊ. 3:5).

3) **ವಿಗ್ರಹಾರಾಧನೆ :–** ದೇವರ ವಾಕ್ಯದಲ್ಲಿ ಎರಡನೆಯ ಆಜ್ಞೆ ವಿಮೋ. 20:4–6 ವಿಗ್ರಹಾರಾಧನೆ ಮಾಡಬಾರದು ಎಂದು ತಿಳಿಸುತ್ತದೆ. ದೇವರು ಆತ್ಮಸ್ವರೂಪನು ಆತನನ್ನು

ನೀವು ಹೊರಟು ಹೋಗಿ ಫಲಕೊಡುವವರಾಗಬೇಕೆಂತಲೂ, ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ (ಯೋಹಾ. 15:16).

ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು (ಯೋಹಾ. 4:23–24).

4) **ಬೈಯುವವನು** :– ದೇವರ ವಾಕ್ಯ ಎಫೆ. 4:29 ಹೇಳುತ್ತದೆ, ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತು ಹೊರಡಬಾರದು. ಭಕ್ತಿಯನ್ನು ವೃದ್ಧಿ ಮಾಡುವಂತಹ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ.

5) **ಕುಡುಕುನಾದರೂ**:– 1 ಕೊರಿ. 3:16–17 ರಲ್ಲಿ ನಮ್ಮ ದೇಹವು ದೇವರು ವಾಸಮಾಡುವ ಮಂದಿರವಾಗಿದೆ. ದೇವರು ಮನುಷ್ಯರು ಕಟ್ಟಿದ ಗುಡಿಗಳಲ್ಲಿ ವಾಸಮಾಡುವುದಿಲ್ಲ ಎಂದು ಅ.ಕೃ. 17:24 ರಲ್ಲಿ ಹೇಳುತ್ತದೆ, ಆದುದರಿಂದ ನಮ್ಮ ಶರೀರವನ್ನು ನಾವು ಶುದ್ಧವಾಗಿಡಬೇಕು. ಕುಡಿಕತನ, ತಂಬಾಕು, ಸಿಗರೇಟುಗಳಿಂದ ನಮ್ಮ ಶರೀರನವನ್ನು ಕೆಡಿಸಿದರೆ ದೇವರು ನಮ್ಮನ್ನು ಕೆಡಿಸುತ್ತಾನೆಂದು 1 ಕೊರಿ. 3:17 ರಲ್ಲಿ ಓದುತ್ತೇವೆ. 1 ಕೊರಿ. 6:19–20 ನಮ್ಮ ಶರೀರದಲ್ಲಿ ದೇವರ ಪ್ರಭಾವವನ್ನು ಪ್ರಚಾರಪಡಿಸಬೇಕು.

6) **ಸುಲುಕೊಳ್ಳುವವನು** :– ಲೂಕ. 19:1–10 ರಲ್ಲಿ ಸುಂಕದವರ ಮುಖ್ಯಸ್ಥನಾಗಿದ್ದ ಜಕ್ಕಾಯನ ಕುರಿತು ಓದುತ್ತೇವೆ. ಅವನು ಅನ್ಯಾಯದಿಂದ ಆಸ್ತಿಪಾಸ್ತಿ ಸಂಪಾದಿಸುವವನಾಗಿದ್ದನು. ಅವನ ಮನಸ್ಸಿನಲ್ಲಿ ಸಮಾಧಾನವಿರಲಿಲ್ಲ. ಯೇಸು ಅವನ ಹೃದಯದಲ್ಲಿ ಬರಲು ಇದ್ದಕ್ಕಾಗಿ ಮಾನಸಾಂತರ ಪಟ್ಟು ಯಾರಿಗೆ ಅನ್ಯಾಯ ಮಾಡಿದ್ದನೋ ಅದನ್ನು ಅವರಿಗೆ 4 ಪಟ್ಟು ಹೆಚ್ಚು ಹಿಂತಿರುಗಿಸಲು ತೀರ್ಮಾನ ತೆಗೆದುಕೊಂಡನು. ಇದರಿಂದ ಕರ್ತನಾದ ಯೇಸುಕ್ರಿಸ್ತನು ಈ ಮನೆಗೆ ರಕ್ಷಣೆ ಬಂತು ಎಂದು ಹೇಳಿದನು.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

## ಪ್ರಾರ್ಥನಾ ಮನವಿಗಳು

- **ಮೇ 25 ರಿಂದ ಜುಲೈ 03ರವರೆಗೆ ನಡೆಸಲ್ಪಡುವ 40 ದಿವಸದ ಬಿಡುಗಡೆ, ಸ್ವಸ್ಥತೆಯ ಹಾಗೂ ಉಪವಾಸ ಕೂಟಕ್ಕಾಗಿ ಪ್ರಾರ್ಥಿಸಿರಿ.**
- ವಾತವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುವುದಕ್ಕಾಗಿ ಯಾವುದೇ ಪ್ರಕೃತಿ ವಿಕೋಪಗಳು, ಭೂಕಂಪಗಳು, ಸುನಾಮಿಗಳು ಉಂಟಾಗದಂತೆ ಪ್ರಾರ್ಥಿಸಿರಿ.
- ನೇಪಾಳ ದೇಶಕ್ಕಾಗಿ ಪ್ರಾರ್ಥಿಸಿರಿ ಈಗಾಗಲೇ ಭೂಕಂಪದಿಂದ ತನ್ನ ಕುಟುಂಬದವರನ್ನು ಕಳೆದುಕೊಂಡಿರುವ ಪ್ರತಿಯೊಬ್ಬರನ್ನು ಕರ್ತನು ಸಂತೈಸುವುದಕ್ಕಾಗಿ ಆಹಾರವಿಲ್ಲದೆ, ಮನೆಯಿಲ್ಲದೆ ಕಷ್ಟಪಡುತ್ತಿರುವ ನೇಪಾಳದ ಜನರಿಗೆ ಕರ್ತನು ಸಹಾಯಮಾಡುವಂತೆ ಹಾಗೂ ಇನ್ನು ಮುಂದೆ ಯಾವುದೇ ಭೂಕಂಪಗಳು ಸಂಭವಿಸದ ಹಾಗೆ ಕರ್ತನು ತನ್ನ ಜನರನ್ನು ರಕ್ಷಿಸಿ ಕಾಪಾಡುವಂತೆ ಪ್ರಾರ್ಥಿಸಿರಿ.
- ಈ ವರ್ಷದಲ್ಲಿ ಉತ್ತಮವಾದ ಮಳೆ ಬೆಳೆಯಾಗುವಂತೆ ಯಾವುದೇ ಬರಗಾಲಗಳು, ನೀರಿನ ಕೊರತೆ, ವಿದ್ಯುತ್‌ಚ್ಛಕ್ತಿಯ ಕೊರತೆಗಳು ಉಂಟಾಗದಂತೆ ಪ್ರಾರ್ಥಿಸಿರಿ.
- ದೇವರ ಸ್ವರ ಮಾಸ ಪತ್ರಿಕೆಯ ಸೇವೆಗಾಗಿ ಪ್ರಾರ್ಥಿಸಿರಿ.
- ಕರ್ತನ ಸೇವೆಯಲ್ಲಿ ಬಿತ್ತುವ ಕೈಗಳಿಗಾಗಿ, ಮಿಶನರಿಗಳ ಅಗತ್ಯತೆಗಳು ಸಂಧಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.
- ಪ್ರತಿಯೊಂದು ವಿಶ್ವಾಸಿಗಳು ಮತ್ತು ದೇವ ಸೇವಕರುಗಳು ಪರಿಶುದ್ಧರಾಗಿ ಜೀವಿಸಲು ಹಾಗೂ ರಕ್ಷಣೆಯಲ್ಲಿ ಸ್ಥಿರವಾಗಿ ನಿಲ್ಲಲು ಕರ್ತನು ಬಲಪಡಿಸಿ ನಡೆಸಲು ಪ್ರಾರ್ಥಿಸಿರಿ.
- ನಮ್ಮ ಭಾರತ ದೇಶದ ಪ್ರತಿಯೊಂದು ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ.

ಧರ್ಮಾತ್ಮನ ಫಲ ಜೀವವೃಕ್ಷ ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು
(ಜ್ಞಾನೋ. 11:30).

# ಪವಿತ್ರ ಜೀವಿತದ ರಹಸ್ಯ !

**"ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ"** (2 ಕೊರಿ. 7:1).

ಪವಿತ್ರವಾದ ಜೀವಿತ ಪರಿಪೂರ್ಣತೆಯನ್ನು ಸೂಚಿಸುವದು. ಅಪೊ. ಪೌಲನು ಕೊರಿಂಥ ಸಭೆಯವರಿಗೆ ಬರೆಯುವಾಗ, ಪವಿತ್ರತ್ವವನ್ನು ಸಿದ್ಧಿಗೆ ತರಲು ಶರೀರಾತ್ಮಗಳ ಕಲ್ಮಶಗಳನ್ನು ತೊಲಗಿಸಬೇಕೆಂದು ಆಲೋಚನೆ ಹೇಳುತ್ತಾನೆ. ಈ ಶರೀರಾತ್ಮಗಳ ಕಲ್ಮಶಗಳು ಒಬ್ಬ ಮನುಷ್ಯನಿಂದ ತೊಲಗಬೇಕಾದರೆ, ಅವನಿಗೆ ದೇವರ ಭಯ ಅತಿ ಅವಶ್ಯವಾದದ್ದು. ದೇವರಿಗೆ ಭಯಪಡುವಾಗ ಮಾತ್ರ ಪಾಪದ ಕುರಿತಾಗಿ ಹೇಸಿಗೆ ಒಬ್ಬನ ಅಂತರ್ಯದಲ್ಲಿ ಹುಟ್ಟಲು ಸಾಧ್ಯ.

**"ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ"** (ಮತ್ತಾ. 5:48) ಎಂದು ಕರ್ತನಾದ ಯೇಸುಕ್ರಿಸ್ತನು ತನ್ನ ಪರ್ವತ ಪ್ರಸಂಗದಲ್ಲಿ ಬೋಧಿಸುತ್ತಾನೆ. ಪಾಪದೋಷಗಳು ಇರುವಲ್ಲಿ ದೇವರು ತಂಗುವದಿಲ್ಲ. ಹಳೆಯ ಒಡಂಬಡಿಕೆಯ ಭಕ್ತರಾದ ಹನೋಕ, ನೋಹ, ಎಲೀಷ, ಯೆಶಾಯ, ಯೆರೆಮೀಯ, ಯೆಹೆಜ್ಕೇಲ, ಯೋಸೇಫ, ದಾನಿಯೇಲ ಇವರೆಲ್ಲರೂ ಪರಿಶುದ್ಧತ್ವದಲ್ಲಿ ಜೀವಿಸಿದರು. ಎಲ್ಲಾ ಧರ್ಮಗಳ ಧ್ಯೇಯ ಪವಿತ್ರತೆಯೇ ಆಗಿದೆ. ಸಾಧು ಸನ್ಯಾಸಿಗಳು ಧ್ಯಾನಿಸಲು ಗವಿಗಳನ್ನು ಹುಡುಕಿಹೋಗುತ್ತಾರೆ. ಮೊಳೆಯ ಹಾಸಿಗೆಯ ಮೇಲೆ ಮಲಗುತ್ತಾರೆ, ತಲೆಕೆಳಗಾಗಿ ನಿಲ್ಲುತ್ತಾರೆ, ತಮ್ಮ ದೇಹಗಳನ್ನು ದಂಡಿಸುತ್ತಾರೆ ಆದರೂ ಅಲ್ಲಿ ಪವಿತ್ರತೆ ಇಲ್ಲ ಏಕೆ?

ಇಂದು ಪ್ರಪಂಚ ಅಶುದ್ಧತೆಯೆಂಬ ಹೊಲಸಿನಿಂದ ತುಂಬಿದೆ. ಮನುಷ್ಯರು ತಮ್ಮ ಸ್ವಂತ ಪ್ರಯತ್ನದಿಂದ ಸೈತಾನನ ಶಕ್ತಿಯನ್ನು ಜಯಿಸಲು ಸಾಧ್ಯವಿಲ್ಲ. ಹೇಗೆ ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲವೋ, ಹಾಗೆಯೇ ಮನುಷ್ಯನು ತನ್ನೊಬ್ಬನ ಪ್ರಯತ್ನದಿಂದ ಪವಿತ್ರತೆಯನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ. ನಾವು ಪಾಪವನ್ನು ಜಯಿಸಿ ಪರಿಶುದ್ಧರಾಗಿ ಜೀವಿಸಬೇಕಾದರೆ, ದೇವರೊಂದಿಗಿನ ಅನ್ಯೋನ್ಯತೆ, ಸಹಾಯ ಬೇಕೇಬೇಕು. ದಾನಿಯೇಲನು ಯೆರೂಸಲೇಮಿನಿಂದ ಬಾಬೆಲಿಗೆ ಸೆರೆ ಒಯ್ಯಲ್ಪಟ್ಟು ಸನ್ನಿಧಿ ಸೇವೆಗಾಗಿ ಆರಿಸಲ್ಪಟ್ಟಾಗ ತರಬೇತಿಯ ಅವಧಿಯಲ್ಲಿ ಅವನಿಗೆ ರಾಜನು ಸೇವಿಸುವ ಭೋಜನ ಪದಾರ್ಥಗಳನ್ನು ದ್ರಾಕ್ಷಾರಸವನ್ನೂ ಕೊಡಬೇಕೆಂದು ಅರಸನ ಅಪ್ಪಣೆ ಆಯಿತು. ಅರಸನ ಭೋಜನ ಪದಾರ್ಥಗಳನ್ನು ದ್ರಾಕ್ಷಾರಸವನ್ನು ಕೊಡಲು ಬಂದಾಗ ದಾನಿಯೇಲನು ದ್ರಾಕ್ಷಾರಸವನ್ನು ಕುಡಿದು ತನ್ನನ್ನು ತಾನು ಅಶುದ್ಧ ಪಡಿಸಿಕೊಳ್ಳಬಾರದೆಂದು ನಿಶ್ಚಯಿಸಿ, ಕಂಚುಕಿಯರ ಅಧ್ಯಕ್ಷನಿಗೆ **"ನಾನು ಅಶುದ್ಧನಾಗಲಾರೆ ದಯವಿಟ್ಟು ಕ್ಷಮಿಸು"** ಎಂದು ವಿಜ್ಞಾಪಿಸಿದಾಗ, ದೇವರು ಕಂಚುಕಿಯರ ಅಧ್ಯಕ್ಷನ ಮನಸ್ಸಿನಲ್ಲಿ ದಾನಿಯೇಲನ ಮೇಲೆ ಕನಿಕರವನ್ನು ದಯೆಯನ್ನು ಹುಟ್ಟಿಸಿದನು. ದಾನಿಯೇಲನಲ್ಲಿ ತಾನು ರಾಜನು ಸೇವಿಸುವ ಆಹಾರ ಪದಾರ್ಥ ಹಾಗೂ ದ್ರಾಕ್ಷಾರಸಗಳನ್ನು ಸೇವಿಸಿ ತನ್ನನ್ನು ಅಶುದ್ಧ ಮಾಡಿಕೊಳ್ಳಬಾರದೆಂಬ ದೃಢ ನಿಶ್ಚಯ ಇದದ್ದರಿಂದ ದೇವರು ಅವನ ನಿರ್ಧಾರವನ್ನು ಘನಪಡಿಸಿದನು. ನಾವೂ ಪಾಪದಿಂದ ದೂರವಿರಬೇಕೆಂಬ ನಿಶ್ಚಯ ನಮ್ಮಲ್ಲಿರುವದಾದರೆ ಕರ್ತನು ನಿಶ್ಚಯವಾಗಿ ಈ ಪ್ರಪಂಚದ ಅಶುದ್ಧತೆಗಳಿಂದ ನಮ್ಮನ್ನು ದೂರಮಾಡಿ ಪವಿತ್ರತೆಯಲ್ಲಿ ನೆಲೆಗೊಳಿಸುವನು.

ನಮ್ಮ ಕರ್ತವ್ಯ ಬಾನೆಗಳಿಗೆ ನೀರು ತುಂಬುವದು. ಅದನ್ನು ದ್ರಾಕ್ಷಾರಸವಾಗಿ ಮಾರ್ಪಡಿಸುವುದು ಕರ್ತನ ಕೆಲಸ. ಬಂಡೆಯನ್ನು ಉರುಳಿಸುವದು ನಮ್ಮ ಕರ್ತವ್ಯ, ಲಾಜರನನ್ನು ಹೊರಗೆ ಕರೆಯುವದು ಕರ್ತನ ಕೆಲಸ. ಐದು ರೊಟ್ಟಿ ಎರಡು ಮೀನು ತರುವದು ನಮ್ಮ ಕರ್ತವ್ಯ, ಅದನ್ನು ಆಶೀರ್ವದಿಸಿ ವೃದ್ಧಿ ಮಾಡುವದು ಆತನ ಕೆಲಸ. ಇದೇ ಪವಿತ್ರತೆಗಳಿಸುವದರಲ್ಲಿನ ಜಂಟಿ ಕಾರ್ಯ. ನಮ್ಮ ಜೀವಿತದಲ್ಲಿ ಆಳವಾದ ಆತ್ಮೀಕ ದಾಹ, ದೃಢನಿರ್ಧಾರ ಮತ್ತು ವ್ಯವಸ್ಥಿತ ಸಮರ್ಪಣಾ ಭಾವ ನಮಗೆ ಇರಬೇಕು. ಆಗ ಕರ್ತನು ನಮ್ಮನ್ನು ಪವಿತ್ರ ಪಡಿಸುವನು. ನಮ್ಮನ್ನು ಶುದ್ದೀಕರಿಸಿ ಪವಿತ್ರತೆಯ ಎಡೆಗೆ ನಡೆಸುವಂತಹ ನಾಲ್ಕು ಸಾಧನಗಳುಂಟು.

1. **ಕ್ರಿಸ್ತನ ರಕ್ತದಿಂದ ಪರಿಶುದ್ಧತೆ! "ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಪವಿತ್ರಪಡಿಸುವದಕೋಸ್ಕರ ಪಟ್ಟಣದ ಹೊರಗೆ ಸತ್ತನು"** (ಇಬ್ರಿ. 13:12). ಹಳೆಯ ಒಡಂಬಡಿಕೆಯ ಕಾಲದಲ್ಲಿ ಮಾನವನ ಪಾಪನಿವಾರಣಾರ್ಥವಾಗಿ ಹೋತ ಮತ್ತು ಹೋರಿಗಳ ರಕ್ತವು ಯಜ್ಞವೇದಿಯ ಮೇಲೆ ಸಮರ್ಪಿಸಲ್ಪಡುತ್ತಿತ್ತು. ಈ ಪ್ರಾಯಶ್ಚಿತ್ತ ಯಜ್ಞವು

ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು
ನಮ್ಮ ಹೃದಯಗಳಲ್ಲಿ ಧಾರಳವಾಗಿ ಸುರಿದಿದೆಯಲ್ಲಾ (ರೋಮ. 5:5).

ಪ್ರತಿವರ್ಷವೂ ಸಮರ್ಪಿಸಲ್ಪಡುತ್ತಿತ್ತು. ಹೊಸ ಒಡಂಬಡಿಕೆಯಲ್ಲಿ ದೇವಕುಮಾರನಾದ ಯೇಸುಕ್ರಿಸ್ತನು ಶರೀರಧಾರಿಯಾಗಿ ದೇವರು ನೇಮಿಸಿದ ಕುರಿಮರಿಯಾಗಿ ಈ ಲೋಕಕ್ಕೆ ಬಂದು ಸಕಲ ಮಾನವ ಕೋಟಿಯ ಪಾಪ ನಿವಾರಣೆಗಾಗಿ ಕ್ರೂಜೆಯಲ್ಲಿ ತನ್ನ ರಕ್ತವನ್ನು ಸುರಿಸಿದನು. ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ (1 ಯೋಹಾ. 1:7).

2. **ದೇವರ ವಾಕ್ಯದಿಂದ ಪರಿಶುದ್ಧತೆ ! "ದೇವರ ವಾಕ್ಯವನ್ನು ಹೇಳಿ ಪ್ರಾರ್ಥಿಸುವದರಿಂದ ಅದು ಪವಿತ್ರವಾಗುತ್ತದಲ್ಲಾ:** (1 ತಿಮೊ. 4:5). ಸತ್ಯವೇದವು ದೇವರ ವಾಕ್ಯದಿಂದ ಕೂಡಿದ್ದು ದೇವರಾತ್ಮನಿಂದ ಬರೆಯಲ್ಪಟ್ಟದ್ದಾಗಿದೆ. ಅದು ನಮ್ಮನ್ನು ಪರಿಶುದ್ಧಗೊಳಿಸುವದು. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು ನಿನ್ನ ವಾಕ್ಯವೇ ಸತ್ಯವು" (ಯೋಹಾ. 17:17) ಎಂದು ಕರ್ತನಾದ ಯೇಸುಕ್ರಿಸ್ತನೇ ತನ್ನ ಶಿಷ್ಯರಿಗಾಗಿ ದೇವರಲ್ಲಿ ವಿಜ್ಞಾಪಿಸಿದನು. ಪರಿಶುದ್ಧತೆಯ ರಹಸ್ಯ ವಾಕ್ಯದಲ್ಲಿ ಅಡಗಿದೆ. ಆ ವಾಕ್ಯಗಳು ಆತ್ಮವೂ ಜೀವವೂ ಆಗಿದೆ (ಯೋಹಾ. 6:13). ಪಾಪ ಶೋಧನೆಗಳು ಬರುವಾಗ ದೇವರ ವಾಕ್ಯವೆಂಬ ಖಡ್ಗವನ್ನು ಹಿಡಿದುಕೋ (ಇಬ್ರಿ. 4:12) ಎಂದು ಸತ್ಯವೇದ ಹೇಳುತ್ತದೆ. ಯೇಸುಕ್ರಿಸ್ತನು ದೇವರ ವಾಕ್ಯದಿಂದಲೇ ಸೈತಾನನನ್ನು ಜಯಿಸಿದನು.

3. **ಪ್ರಾರ್ಥನೆಯ ಮೂಲಕ ಪರಿಶುದ್ಧತೆ ! "ದೇವರ ವಾಕ್ಯವನ್ನು ಹೇಳಿ ಪ್ರಾರ್ಥಿಸುವದರಿಂದ ಅದು ಪವಿತ್ರವಾಗುತ್ತದಲ್ಲಾ"** (1 ತಿಮೊ. 4:5). ಒಬ್ಬ ಸುಂಕದವನು ದೇವಾಲಯಕ್ಕೆ ಹೋಗಿ ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವುದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡಿದುಕೊಳ್ಳುತ್ತಾ ದೇವರೇ ಪಾಪಿಯಾದ ನನ್ನನ್ನು ಕರುಣಿಸು ಎಂದು ಪ್ರಾರ್ಥಿಸಲಾಗಿ ಅವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನೆಂದು ಲೂಕ. 18:13–14 ರಲ್ಲಿ ಓದುತ್ತೇವೆ. ಹೌದು ಮಾನಸಾಂತರದಿಂದ ಕೂಡಿದ ಪ್ರಾರ್ಥನೆ ಪರಿಶುದ್ಧತೆಯನ್ನು ತಂದುಕೊಡುವದು.

4. **ದೇವರಾತ್ಮನಿಂದ ಪರಿಶುದ್ಧತೆ ! "ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ"** (1 ಕೊರಿ. 2:10). – ದೇವರಾತ್ಮನು ಯಾವಾಗಲೂ ಮನುಷ್ಯರೊಂದಿಗೆ ಹೋರಾಡುವದಿಲ್ಲ. ಆ ಆತ್ಮನು ಪ್ರೇರಿಸುವಾಗ, ಹೋರಾಡುವಾಗ ಅಥವಾ ಬೋಧಿಸುವಾಗ ನಮ್ಮನ್ನು ನಾವು ಆತನ ಮುಂದೆ ತಗ್ಗಿಸಿಕೊಂಡು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಯಾಕಂದರೆ ನಮ್ಮ ದೇಹವು ಆತನ ಗರ್ಭಗುಡಿಯಾಗಿದೆ (1 ಕೊರಿ. 6:19). ದೇವರು ನಮಗೆ ಪವಿತ್ರಾತ್ಮನನ್ನು ಅನುಗ್ರಹಿಸಿರುವ ಮುಖ್ಯ ಕಾರಣ ನಮ್ಮನ್ನು ಪರಿಶುದ್ಧಪಡಿಸಲಿಕ್ಕಾಗಿ, ಪರಿಶುದ್ಧತೆಯಲ್ಲಿ ನಡೆಸಲಿಕ್ಕಾಗಿ.

ಈ ನಾಲ್ಕು ಸಾಧನಗಳನ್ನು ಉಪಯೋಗಿಸಿಕೊಂಡು ಪವಿತ್ರತೆಯ ಮಾರ್ಗದಲ್ಲಿ ಪರಿಪೂರ್ಣತೆಯ ಎಡೆಗೆ ಸಾಗೋಣ.

ಸಂಗ್ರಹ.

# ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :

ಜಾನ್‌ವೆಸ್ಲಿಯವರ ಕಾಲದಲ್ಲಿ ಈಗಿನಂತೆ ಶೀಘ್ರವಾಗಿ ಪ್ರಯಾಣಿಸಲು ಯಾವುದೇ ಸೌಕರ್ಯವಿರಲಿಲ್ಲ. ಕುದುರೆಯನ್ನೇರಿಯೇ ಕಷ್ಟಪಟ್ಟು ಪ್ರಯಾಣ ಮಾಡಬೇಕಿತ್ತು. ದೇವಸೇವೆಯ ನಿಮಿತ್ತ 2,50.000 ಮೈಲುಗಳು, ನಲ್ವತ್ತು ವರುಷಗಳು ಪ್ರಯಾಣ ಮಾಡಿ ಪ್ರಸಂಗಿಸಿದ ಅವರು ನಾಲ್ಕು ಸಾವಿರಕ್ಕೂ ಮೇಲ್ಪಟ್ಟು ಪ್ರಸಂಗ ಮಾಡಿರುವರು. ದೇವರ ಸೇವೆಯ ನಿಮಿತ್ತ ಅವರು ಹತ್ತು ಭಾಷೆಗಳನ್ನು ಕಲಿತಿದ್ದರು. ಕರ್ತನ ನಾಮದ ಮಹಿಮೆಗಾಗಿ ಅವರು 400 ಪುಸ್ತಕಗಳನ್ನು ಬರೆದಿರುವರು.

ಅವರಿಗೆ ಎಂಭತ್ತ ಮೂರು ವರುಷ ವಯಸ್ಸಾದರೂ ವಿಶ್ರಾಂತಿ ಇಲ್ಲ. ಒಂದು ದಿನಕ್ಕೆ ಹದಿನೈದು ಗಂಟೆಗಳ ಕಾಲ ಸತತವಾಗಿ ಬರೆದರೂ, ಇನ್ನೂ ಹೆಚ್ಚಿನ ಸಮಯ ಬರೆಯಲಾಗಲಿಲ್ಲವೇ ಎಂದು ಹಂಬಲಿಸುತ್ತಿದ್ದರು. ಎಂಭತ್ತಾರು ವರುಷಗಳಾದಾಗಲೂ ಅವರು ಪ್ರಸಂಗ ಮಾಡುವುದನ್ನು ನಿಲ್ಲಿಸಲಿಲ್ಲ. ದಿನವೂ ಎರಡು ಬಾರಿ ನಿಂತು ಪ್ರಸಂಗ ಮಾಡುತ್ತಿದ್ದರು.

ಸಂಗ್ರಹ.

ಎಲ್ಲಾ ಗ್ರಹಿಕೆಯನ್ನೂ ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು (ಫಿಲಿ. 4:7).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಬ್ರಿಟನ್‌ನಲ್ಲಿ ಇನ್ನೈದು ವರ್ಷ ಕ್ಯಾಮರೂಲ್ ಬ್ರಿಟನ್ ಚುನಾವಣೆಯಲ್ಲಿ ಹಾಲಿ ಪ್ರಧಾನಿ ಡೇವಿಡ್ ಕ್ಯಾಮರೂನ್ ನೇತೃತ್ವದ ಕನ್ಸರ್‌ವೇಟಿವ್ ಪಕ್ಷ ಸರಳ ಬಹುಮತ ಪಡೆದಿದೆ. ಒಟ್ಟು 650 ಕ್ಷೇತ್ರಗಳ ಪೈಕಿ 329 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ.

- ಭೂಕಂಪದಿಂದ ನಲುಗಿರುವ ನೇಪಾಳಕ್ಕೆ ಮತ್ತೊಂದು ಸವಾಲು ಎದುರಾಗಿರುವ ಬಹುತೇಕ ಶಾಲಾ ಕಟ್ಟಡಗಳು ನಾಶವಾಗಿರುವುದರಿಂದ ಸುಮಾರು 10 ಲಕ್ಷ ಮಕ್ಕಳ ಶೈಕ್ಷಣಿಕ ಭವಿಷ್ಯದ ಡೋಲಾಯಮಾನವಾಗಿದೆ.

- ಕೇಂದ್ರ ಸರಕಾರ ವಿದೇಶಿ ಹೂಡಿಕೆದಾರರ ಆದಾಯದ ಮೇಲಿನ ಕನಿಷ್ಠ ಪರ್ಯಾಯ ತೆರಿಗೆ (ಎಂಎಟಿ) ಕುರಿತ ವಿವಾದವನ್ನು ಬಗೆಹರಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ ಬೆನ್ನಲ್ಲೇ, ಮುಂಬಯಿ ಷೇರು ಮಾರುಕಟ್ಟೆಯಲ್ಲಿ ಉತ್ಸಾಹ ಮರುಕಳಿಸಿದ್ದು, ಸೂಚ್ಯಂಕ ಸೆನ್ಸೆಕ್ಸ್ 506 ಅಂಕಗಳ ದಿಢೀರ್ ಏರಿಕೆ ದಾಖಲಿಸಿತು.

- ಪೆಸಿಫಿಕ್ ಮಹಾಸಾಗರದಲ್ಲಿನ ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿಯ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಬೀಳುವ ಮುನ್ಸೂಚನೆ ಇದೆ. ಇದರಿಂದಾಗಬಹುದಾದ ಬರ ತಪ್ಪಿಸಿಕೊಳ್ಳಲು ಉದ್ಯೋಗ ಖಾತರಿ ಸಮರ್ಪಕವಾಗಿ ಬಳಸಿಕೊಳ್ಳಿ.

- ವಿದೇಶ ಮತ್ತು ಹೊರ ರಾಜ್ಯಗಳಲ್ಲಿರುವ ಮೂಲ ಕನ್ನಡಿಗರು ಸೇರಿದಂತೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಿಂದ (ಜಾತಿ ಜನಗಣತಿ) ಹೊರಗುಳಿದ ಪ್ರತಿಂಯೊಬ್ಬರನ್ನು ಸಮೀಕ್ಷೆಗೊಳಪಡಿಸಲು ಸರಕಾರ ಆನ್ ಲೈನ್ ವ್ಯವಸ್ಥೆಗೆ ಚಿಂತನೆ ನಡೆಸಿದೆ.

- ಛತ್ತೀಸ್‌ಗಢದಲ್ಲಿ ಅಭೂತಪೂರ್ವ ಭದ್ರತೆಯ ನಡುವೆಯೂ ಮಾವೋವಾದಿಗಳು ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ದಂತೇವಾಡಕ್ಕೆ ಹೊಂದಿಕೊಂಡಿರುವ ಸುಕ್ಮಾ ಜಿಲ್ಲೆಯಲ್ಲಿ 200 ಮಂದಿ ಗ್ರಾಮಸ್ಥರನ್ನು ಅಪರಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೇರ ಸವಾಲು ಹಾಕಿದ್ದಾರೆ. ಇದಲ್ಲದೆ ದಂತೇವಾಡದ ಕಿರಂದೂಲ್ ಗ್ರಾಮದಲ್ಲಿ ರೈಲ್ವೆ ಹಳಿಯನ್ನು ಸ್ಫೋಟಿಸಿದ್ದಾರೆ.

- ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರನ್ನು ಖುಲಾಸೆಗೊಳಿಸಿ ಹೈಕೋರ್ಟ್ ನೀಡಿದ ತೀರ್ಪು ಹೊಸ ತಿರುವು ಪಡೆದುಕೊಂಡಿದೆ. ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ ಆರೋಪಿಗಳಾಗಿದ್ದ ಜಯಲಲಿತಾ ಮತ್ತಿತರರನ್ನು ಪ್ರಕರಣದಲ್ಲಿ ಖುಲಾಸೆಗೊಳಿಸಲು ಪ್ರಮುಖ ಕಾರಣವಾದ ಆದಾಯ ಮೀರಿದ ಆಸ್ತಿ ಲೆಕ್ಕಾಚಾರದಲ್ಲಿ ತಪ್ಪಾಗಿದ್ದು, ಈ ಕಾರಣದಿಂದಾಗಿಯೇ ಆಕೆ ಆರೋಪ ಮುಕ್ತವಾಗುವಂತಾಗಿದೆ ಎಂಬ ಮಾತು ಕೇಳಿಬಂದಿದೆ.


## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0820 2002781, 09902334941**


ದೀನರು ದೇಶವನ್ನು ಅನುಭವಿಸುವರು; ಅವರು ಮಹಸೌಖ್ಯದಿಂದ ಆನಂದಿಸುವರು (ಕೀರ್ತ. 37:11).

# ಕವನಗಳು

ದೇವರಿಂದ ಹೊಂದಿದ ಆಶೀರ್ವಾದ
ನಮ್ಮಲ್ಲಿ ನೆಲೆಗೊಂಡಿದೆ ಸದಾ
ದೇವರಿಂದ ಹೊಂದಿದ ಅಭಿವೃದ್ಧಿ
ನಮ್ಮಲ್ಲಿ ಉಂಟುಮಾಡಿದೆ ಸಮೃದ್ಧಿ.

ದಾರಿತಪ್ಪಿದ ಕುರಿಮರಿಯಂತೆ ಅಲೆಯುತ್ತಿದೆ ನಾನು
ದಾರಿನಡೆಸುವ ಕುರುಬನಾಗಿ ಬಂದೆ ನೀನು
ಹೆಜ್ಜೆ-ಹೆಜ್ಜೆಗೂ ಹಸಿರ ನೀಡಿ ತೋರಿದೆನಗೆ ತಂಪಾದ ಬುಗ್ಗೆಯನು
ನಾ ನಿನಗೆ ಸಲ್ಲಿಸುವೆ ಕೋಟಿ ನಮನವನು.

ದೇವರ ಉಪಕಾರ ನೆನೆದು
ದೇವಾಲಯದಲ್ಲಿ ಸ್ತುತಿಸಿ, ಕುಣಿದು, ನಲಿದು
ಯೇಸುವನ್ನು ಮನಸಾರೆ ಕೊಂಡಾಡುವುದು
ದೇವರಿಗೂ ಮತ್ತು ನನಗೂ ಮೆಚ್ಚಿಕೆಯಾದುದು.

ಯೇಸುವಿನ ಮುದ್ದು ಮುಖ
ನೋಡುವುದೇ ನನ್ನ ತವಕ
ಯೇಸುವಿನ ವಾಕ್ಯವೇ ಆಕರ್ಷಕ
ವಾಕ್ಯದಿಂದಲೇ ನಮ್ಮದು ಪ್ರಕಾಶಿಸುವ ಮುಖ.

**ಸಹೋ ॥ ದೀಪ್ತಿ, ಮಂಗಲ.**

---

## ಪ್ರಿಯ ವಾಚಕರಲ್ಲಿ ವಿನಂತಿ

**ಕಳೆದ ಮಾರ್ಚ್ ತಿಂಗಳಲ್ಲಿ (2015) ಮಹಿಳೆಯರ ಸ್ವರ ಸಂಚಿಕೆಯಲ್ಲಿ ಸತ್ಯವೇದದಲ್ಲಿ ಮದುವೆಗೆ ಸಂಬಂಧವಾಗಿರುವ ಉಪದೇಶಗಳು ಇದರಲ್ಲಿ 3ನೇ ಪಾಯಿಂಟ್ ಕ್ರೈಸ್ತ ವಿಶ್ವಾಸಿಗಳು ಒಂದೇ ಜಾತಿಯ ಲಿಂಗದವರೊಟ್ಟಿಗೆ ಮದುವೆಯಾಗಬಹುದು ಎಂದು ತಪ್ಪಾಗಿ ಮುದ್ರಣವಾಗಿತ್ತು ಅದು ಕ್ರೈಸ್ತ ವಿಶ್ವಾಸಿಗಳು ಒಂದೇ ಜಾತಿಯ ಲಿಂಗದವರೊಟ್ಟಿಗೆ ಮದುವೆಯಾಗಬಾರದು ಎಂಬುದಾಗಿದೆ. ಇದಕ್ಕಾಗಿ ನಾವು ವಿಷಾಧಿಸುತ್ತೇವೆ.**

---

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ಘನವಂತನಾದರೋ, ಘನಕಾರ್ಯಗಳನ್ನು ಕಲ್ಪಿಸುವನು.
ಘನವಾದವುಗಳಲ್ಲಿಯೇ ನಿರತನಾಗಿರುವನು (ಯೆಶಾ. 32:8).

## ಆರೋಗ್ಯ ಸ್ವರ

**ಕೆಲವರಲ್ಲಿ ಪದೇ ಪದೇ ಮಲಬದ್ಧತೆಯ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಈ ಕೆಳಗಿನ ಕಾರಣಗಳಿಂದಾಗಿ ಮಲಬದ್ಧತೆ ಉಂಟಾಗಬಹುದು. ಅವುಗಳಿಗೆ ಸೂಕ್ತ ಪರಿಹಾರ ಕೂಡ ಇದೆ.**

- ಕಡಿಮೆ ಪ್ರಮಾಣದಲ್ಲಿ ನೀರು ಕುಡಿಯುವುದು ಅಥವಾ ನಾರಿನ ಅಂಶ ಇರುವ ಆಹಾರವನ್ನು ಸಾಕಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳದಿರುವುದರಿಂದ ಮಲ ಗಟ್ಟಿಯಾಗಿ ಕರುಳಿನಲ್ಲಿ ಚಲನೆ ಕಷ್ಟವಾಗುತ್ತದೆ.
- ಕ್ರಮ ಬದ್ಧವಾದ ವ್ಯಾಯಾಮ ಮಾಡದಿರುವುದರಿಂದಲೂ ಕರುಳಿನ ಚಲನೆ ನಿಧಾನವಾಗಿ ಆಗುತ್ತದೆ.
- ಒತ್ತಡ ದಿನಚರಿಯಲ್ಲಿ ಬದಲಾವಣೆ ಅಥವಾ ಶೌಚಕ್ಕೆ ಹೋಗುವುದನ್ನು ಮುಂದೂಡುವುದು.
- ಕೆಮ್ಮಿನ ಸಿರಪ್ ತೆಗೆದುಕೊಳ್ಳುತ್ತಿದ್ದರೆ ಅದರಲ್ಲಿರುವ ಕೊಡೀನ್, ಕಬ್ಬಿಣ ಮತ್ತು ಅಂಟಾಸಿಡ್ ಅಂಶದಿಂದ ಈ ತೊಂದರೆ ಉಂಟಾಗಬಹುದು.
- ಮುಟ್ಟು ನಿಲ್ಲುವ ಸಂದರ್ಭದಲ್ಲಿ ಗರ್ಭಿಣಿಯರಲ್ಲಿ ಹಾಗೂ ಮುಟ್ಟು ಆಗುವುದಕ್ಕಿಂತ ಒಂದು ವಾರ ಅಥವಾ 10 ದಿನಕ್ಕೆ ಮೊದಲು ಹಾರ್ಮೋನ್‌ನಲ್ಲಿ ಬದಲಾವಣೆಯಾಗಿ ಮಲಬದ್ಧತೆ ಕಾಡಬಹುದು.

**ಪರಿಹಾರ :**

- ದ್ರವ ಪದಾರ್ಥವನ್ನು ಜಾಸ್ತಿ ತೆಗೆದುಕೊಳ್ಳಬೇಕು (ಸಕ್ಕರೆ ಅಂಶ ಜಾಸ್ತಿ ಇರುವ ಅಥವಾ ಸಾಫ್ಟ್ ಡ್ರಿಂಕ್ಸ್ ಬಿಟ್ಟು)
- ಹಣ್ಣು ಮತ್ತು ತರಕಾರಿಗಳನ್ನು ಯಥೇಚ್ಛವಾಗಿ ಬಳಸಿ (ಉದಾ. ಬಾಳೆಹಣ್ಣು, ಪಪ್ಪಾಯ, ಅಂಜೂರ, ಬಸಳೆ ಸೊಪ್ಪು).
- ಮೊಸರನ್ನು ಜಾಸ್ತಿ ಬಳಸಿ (ಇದರಲ್ಲಿರುವ ಬ್ಯಾಕ್ಟೀರಿಯಾ ಆಹಾರವನ್ನು ಚೆನ್ನಾಗಿ ಜೀರ್ಣಿಸುತ್ತದೆ).
- ದಿನವೂ ಒಂದೇ ಸಮಯಕ್ಕೆ ವಿರಾಮದಿಂದ ಶೌಚಕ್ಕೆ ಹೋಗಿ (ಉಪಹಾರ ಸೇವಿಸಿದ ನಂತರ ಹೋಗುವುದು ಸೂಕ್ತ).
- ಇಸಾಟ್ ಗುಲ್‌ನಂಥ ಮಲಬದ್ಧತೆ ನಿವಾರಕ ಆಹಾರವನ್ನು ಸೇವಿಸಿ.
- ವ್ಯಾಯಾಮ ಮತ್ತು ನಡಿಗೆ ಮಾಡುವುದರಿಂದಲೂ ಇದಕ್ಕೆ ಸಹಾಯವಾಗುತ್ತದೆ ಈ ಎಲ್ಲಾ ಕ್ರಮ ಅನುಸರಿಸಿದರೂ 2–4 ವಾರದೊಳಗೆ ಸರಿಯಾಗದಿದ್ದರೆ ವೈದ್ಯರನ್ನು ಸಂಪರ್ಕಿಸಿ.

ಸಂಗ್ರಹ.

## ಆರೋಗ್ಯಕ್ಕೆ ವಾಟರ್ ಥೆರಪಿ

ಬೆಳಿಗ್ಗೆ ಖಾಲಿ ಹೊಟ್ಟೆಗೆ ನೀರು ಕುಡಿದರೆ ದೇಹಕ್ಕೆ ಅಪಾರವಾದ ಪ್ರಯೋಜನವಿದೆ. ಬೆಳಿಗ್ಗೆ ಖಾಲಿ ಹೊಟ್ಟೆಗೆ ಸಾಕಷ್ಟು ನೀರು ಕುಡಿದರೆ ಹೊಟ್ಟೆಯನ್ನು ಸ್ವಚ್ಛ ಮಾಡುವುದು ಮಾತ್ರವಲ್ಲ, ಇದು ಹಲವಾರು ಖಾಯಿಲೆಗಳನ್ನು ದೂರ ಮಾಡುವಲ್ಲಿ ಸಹಕಾರಿಯಾಗಿದೆ. ಕರುಳನ್ನು ಶುದ್ಧೀಕರಿಸುತ್ತದೆ ಮತ್ತು ಪೌಷ್ಟಿಕ ದ್ರವ್ಯಗಳ ಹೀರಿಕೆಯನ್ನು ಸುಧಾರಿಸುತ್ತದೆ. ಜೀರ್ಣಕಾರಿ ವ್ಯವಸ್ಥೆಯನ್ನು ಸ್ವಯಂಚಾಲಿತವಾಗಿ ಮಾಡುವುದರ ಜತೆಗೆ ಇನ್ನೂ ಇತರ ವಿಷಯಗಳ ಬಗ್ಗೆ ಕಾಳಜಿ ವಹಿಸುತ್ತದೆ. ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ. ರಕ್ತದಿಂದ ವಿಷಕಾರಿ ಅಂಶವನ್ನು ಹೊರ ಹಾಕುತ್ತದೆ. ನೀರು ಕುಡಿಯುವುದರಿಂದ ಹೊಸ ರಕ್ತ ಕಣಗಳು ಮತ್ತು ಸ್ನಾಯು ಜೀವಕೋಶಗಳ ಸೃಷ್ಟಿಯನ್ನು ಸುಧಾರಿಸುತ್ತದೆ ಹಾಗೂ ತೂಕ ಕಳೆದುಕೊಳ್ಳಲು ಸಹಕಾರಿಯಾಗುತ್ತದೆ. ಆದರೆ ಬೆಳಿಗ್ಗೆ ನೀರು ಕುಡಿದ ಬಳಿಕ ಸ್ವಲ್ಪ ಸಮಯದವರೆಗೆ ಯಾವುದೇ ಆಹಾರವನ್ನು ಸೇವಿಸಬಾರದು ಇದನ್ನು ಮಾತ್ರ ಗಮನದಲ್ಲಿಡಬೇಕು. ವಾಟರ್ ಥೆರಪಿ ಮಾಡುವುದರಿಂದ ಯಾವುದೇ ಅಡ್ಡಪರಿಣಾಮ ಉಂಟಾಗುವುದಿಲ್ಲ ಹಾಗೂ ಮಟಬಾಲಿಸಂ ಅನ್ನು ಹೆಚ್ಚಿಸುತ್ತದೆ. ದಿನಕ್ಕೆ ನಾಲ್ಕು ಲೋಟ ನೀರು (ಒಂದು ಲೀಟರ್) ಕುಡಿದರೆ ಉತ್ತಮ ಆರೋಗ್ಯಕ್ಕೆ ಒಳ್ಳೆಯದು. ಆರಂಭದಲ್ಲಿ ಅಧಿಕ ಅನಿಸಿದರೆ ಸ್ವಲ್ಪ ಸ್ವಲ್ಪವೇ ಕುಡಿದು ನಿಧಾನವಾಗಿ ಹೆಚ್ಚಿಸಬಹುದು.

ಸಂಗ್ರಹ.

ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿ ಹೋದರೂ ನಮಗೇನೂ ಭಯವಿಲ್ಲ (ಕೀರ್ತ. 46:2).

## ಡಿಜಿಎಮ್ ಬೇತೇಲ್ ಅಂಕಣ

- **ಮೇ 25 ರಿಂದ ಜುಲೈ 03ರವರೆಗೆ 40 ದಿವಸದ ಬಿಡುಗಡೆ, ಸ್ವಸ್ಥತೆಯ ಹಾಗೂ ಉಪವಾಸ ಕೂಟವನ್ನು ಡಿಜಿಎಮ್ ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಉಡುಪಿಯಲ್ಲಿ ಏರ್ಪಡಿಸಲಾಗಿದೆ.**
- **ಆಗಸ್ಟ್ 17 ರಿಂದ 26ರವರೆಗೆ 11ನೇ ಕೆರೀತ್ ಕೂಟವು ನಡೆಸಲ್ಪಡುವದು.**
- **ಡಿಜಿಎಮ್ ಬೇತೇಲ್ ಇಂಟರ್ ನ್ಯಾಶನಲ್ ಸ್ಕೂಲ್ ಪ್ರಾರಂಭವಾಗಿದೆ.**

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

### ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ,**
**ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0820 2559886**

## ನಗೆಹನಿಗಳು

ಪಚ್ಚ : ಮೊನ್ನೆ ಪೇಪರ್‌ನಲ್ಲಿ ಕುಡಿತದಿಂದ ಹಾನಿ ಅಂತಾ ಬರೆದಿತ್ತು. ಅದ್ಕೆ ಬಿಟ್‌ಬಿಟ್ಟೆ !

ಗುಂಡ : ಹೌದಾ ಬಿಟಬಿಟ್ಟಾ ...?

ಪಚ್ಚ: ಹೂ ! ಪೇಪರ್ ಓದೋದು ಬಿಟ್‌ಬಿಟ್ಟೆ.

ಮರಿಪಚ್ಚ :– ಅಪ್ಪಾ ನಾನು ಪರೀಕ್ಷೆಯಲ್ಲಿ ಫಸ್ಟ್ ರ್‍ಯಾಂಕ್ ತೆಗೆದ್ರೆ ನಿಂಗೇನ್ಸುತ್ತೆ?

ಪಚ್ಚ : ಖುಷಿಯಿಂದ ಹುಚ್ಚ ಆಗ್ ಬಿಡ್ತೀನಿ ಅಷ್ಟೇ ....

ಮರಿಪಚ್ಚ : ಅದ್ಕೆ ನಾನು ಫೇಲ್ ಆದೆ !

ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರುಗಿ ಈ ದೇಶಕ್ಕೆ ಬರಮಾಡುತ್ತೇನೆ (ಆದಿ. 28:15).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

ಆರ್ಥಿಕ ಸಹಾಯ ನೀಡಲಿಚ್ಛಿಸುವವರು :

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD
(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

## ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ಯೆಹೋವನೇ, ನನ್ನ ದೇವರೇ ನೀನು ಸರ್ವೋತ್ಕೃಷ್ಟನು,
ಪ್ರಭಾವ ಮಹತ್ವಗಳಿಂದ ಭೂಷಿತನಾಗಿದ್ದೀ (ಕೀರ್ತ. 104:1).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ದೇವ ಜನರು ದುರ್ಬೋಧನೆಗೆ ಒಳಗಾಗದೆ ಇರಬೇಕಾದರೆ ಏನು ಮಾಡುಬೇಕು ?**

1) ದೇವರ ವಾಕ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು

2) ದೇವರ ವಾಕ್ಯದ ಸರಿಯಾದ ತಿಳುವಳಿಕೆ ಇರಬೇಕು

3) ದೇವರ ವಾಕ್ಯದ ಕುರಿತು ಅಸ್ಪಷ್ಟವಾದ ತಿಳುವಳಿಕೆ ಇದ್ದರೆ ಅಥವಾ ಸಂಶಯ ಇದ್ದರೆ ತಮ್ಮ ಸಭಾಪಾಲಕರ, ಹಿರಿಯರ ಮೂಲಕ ತಿಳುವಳಿಕೆ ಹೊಂದಿ ಪರಿಹರಿಸಿಕೊಳ್ಳಬೇಕು.

4) ಆತ್ಮೀಕ ಜೀವನದಲ್ಲಿ ಬೆಳೆದಂತೆ ಕ್ರೈಸ್ತ ವಿಶ್ವಾಸಿಗಳೊಂದಿಗೆ ಒಡನಾಟವಿಟ್ಟು ದೇವರ ವಾಕ್ಯವನ್ನು ಪರಸ್ಪರ ಚರ್ಚೆ ಮಾಡಬೇಕು.

5) ರಕ್ಷಣೆ ಹೊಂದಿದ ನಂತರ ಸಭೆಯಿಂದ ಸಭೆಗಳನ್ನು ಬದಲಾಯಿಸುತ್ತಾ ಇರಬಾರದು, ಒಂದು ಒಳ್ಳೆಯ ಆತ್ಮೀಕ ಸಭೆಯಲ್ಲಿ ನಿಂತು ಚೆನ್ನಾಗಿ ಬೆಳೆಯಬೇಕು.

6) ನಾವು ಹೋಗುವಂತಹ ಸಭೆಯಲ್ಲಿ ಏನಾದರೂ ಸಮಸ್ಯೆಗಳಾದಲ್ಲಿ ಕುಳಿತುಕೊಂಡು ಚರ್ಚಿಸಿ ಪರಿಹರಿಸಿಕೊಳ್ಳಬೇಕು.

7) ಯಾವುದೇ ದೇವ ಸೇವಕರನ್ನು ಬೋಧಕರನ್ನು ಸಭೆಗೆ ಆಹ್ವಾನಿಸುವಾಗ ಅವರ ಹಿನ್ನಲೆ ಏನು, ಅವರ ಸಾಕ್ಷಿ, ಅವರ ಉಪದೇಶ ಇದೆಲ್ಲದರ ಕುರಿತು ಸರಿಯಾಗಿ ತಿಳಿದುಕೊಂಡು ಆಹ್ವಾನಿಸಬೇಕು.

8) ಯಾವುದೇ ಒಂದು ಪ್ರಾರ್ಥನಾ ಕೂಟವು ಯಾವುದೇ ಒಂದು ಸ್ಥಳದಲ್ಲಿ ಯಾರೋ ಬಂದು ನಡೆಸುತ್ತಾ ಇದ್ದರೆ ಅವರ ಮತ್ತು ಅವರ ಉಪದೇಶದ ಕುರಿತು ಸರಿಯಾಗಿ ತಿಳಿದುಕೊಂಡು ಮುಂದೆ ಹೆಜ್ಜೆ ಇಡಬೇಕು.

9) ದೇವರ ವಾಕ್ಯದಲ್ಲಿ ಇಲ್ಲದ್ದನ್ನು ಬೋಧಿಸಿದರೆ ಅದನ್ನು ನಂಬಬಾರದು.

10) ಕ್ರಿಸ್ತೀಯ ಜೀವಿತದ ಅಸ್ಥಿವಾರ ಉಪದೇಶಗಳ ಕುರಿತಾಗಿ (ಮೂಲ ಸತ್ಯಗಳ) ಸರಿಯಾದ ತಿಳುವಳಿಕೆ ನಮಗೆ ಇರಬೇಕು.

11) ಅನುದಿನವೂ ಆತ್ಮೀಕ ಜ್ಞಾನದಲ್ಲಿ (ದೇವರ ವಾಕ್ಯದ ಜ್ಞಾನದಲ್ಲಿ) ಬೆಳವಣಿಗೆ ಹೊಂದಿಕೊಳ್ಳಬೇಕು.

12) ನಮ್ಮ ಪರಿಪೂರ್ಣ ನಂಬಿಕೆಯನ್ನು ದೇವರ ವಾಕ್ಯದಲ್ಲಿ ಇಡಬೇಕು (ನಮ್ಮ ನಂಬಿಕೆಯ ಸಂಪೂರ್ಣ ಅಸ್ಥಿವಾರ ಸತ್ಯವೇದವಾಗಿದೆ)

**ದೇವ ಜನರು ದುರ್ಬೋಧನೆಗೆ ಒಳಗಾಗದೆ ಇರಬೇಕಾದರೆ ಏನು ಮಾಡಬೇಕು ?**

1) **ದೇವರ ವಾಕ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು :–** "ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು" (ಕೀರ್ತ. 1:1–3). ದೇವರ ವಾಕ್ಯವನ್ನು ನಾವು ಅಭ್ಯಾಸ ಮಾಡುವುದರಿಂದಾಗಿ ನಮ್ಮ ಜೀವಿತದಲ್ಲಿ ಸಂಭವಿಸಲಿಕ್ಕಿರುವ ಅನೇಕ ಅಪಾಯಗಳಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯ, ಆತ್ಮೀಕ ವಂಚನೆಯಿಂದಲೂ ತಪ್ಪಿಸಿಕೊಳ್ಳಲು ಸಾಧ್ಯ.

ಪ್ರತಿ ದಿನ ಸತ್ಯವೇದವನ್ನು ಅದಷ್ಟು ಓದಿ ಧ್ಯಾನಿಸಬೇಕು ಮಾತ್ರವಲ್ಲ, ಅಧ್ಯಾಯ ಅಧ್ಯಾಯವಾಗಿಯೂ, ಪುಸ್ತಕ ಪುಸ್ತಕವಾಗಿಯೂ, ವಚನ ವಚನವಾಗಿಯೂ ನಾವು ಅಭ್ಯಾಸ ಮಾಡಬೇಕು. ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ವ್ಯತ್ಯಾಸಗಳ ಕುರಿತು ಅಭ್ಯಾಸ ಮಾಡಬೇಕು. ಧರ್ಮಶಾಸ್ತ್ರ ಮತ್ತು ಕೃಪೆಗೆ ಇರುವ ವ್ಯತ್ಯಾಸಗಳ ಕುರಿತು ಅಭ್ಯಾಸ ಮಾಡಬೇಕು. ಯಾಕಂದರೆ ಅನೇಕರು ಇಂದು ಧರ್ಮಶಾಸ್ತ್ರವನ್ನೇ ಬೋಧಿಸಿ ದಾಸತ್ವದಲ್ಲಿಡಲು ಪ್ರಯತ್ನಿಸುತ್ತಿದ್ದಾರೆ. ಇನ್ನು ಅನೇಕರು ಶನಿವಾರ ಸಬ್ಬತ್ತನ್ನು ಆಚರಿಸಬೇಕು ಎಂದು ವಾದ ಮಾಡುತ್ತಾರೆ ಆದಕಾರಣ ಧರ್ಮಶಾಸ್ತ್ರಕ್ಕೂ ಕೃಪೆಗೂ ಇರುವಂತಹ ವ್ಯತ್ಯಾಸವನ್ನು ಸತ್ಯವೇದ ಅಭ್ಯಾಸ ಮಾಡುವುದರ ಮೂಲಕ ತಿಳಿದುಕೊಳ್ಳಬಹುದು.

**ಧರ್ಮಶಾಸ್ತ್ರಕ್ಕೂ ಕೃಪೆಗೂ ಇರುವ ವ್ಯತ್ಯಾಸಗಳೇನು ?**

1) ಧರ್ಮಶಾಸ್ತ್ರವು ಪಾಪದ ಸಂಬಳ ಮರಣ ಎಂದು ಹೇಳುತ್ತದೆ (ರೋಮ. 6:23). ಕೃಪೆಯು ದೇವರ

ನೀನೇ ನನಗೆ ಮರೆಯು, ನಿರಪಾಯವಾಗಿ ನನ್ನನ್ನು ಕಾಯುವಿ;
ವಿಮೋಚನ ಧ್ವನಿಯಿಂದ ನನ್ನನ್ನು ಆವರಿಸಿಕೊಳ್ಳುತ್ತೀ (ಕೀರ್ತ. 32:7).

ಉಚಿತವಾದ ವರ ಕರ್ತನಾದ ಯೇಸುಕ್ರಿಸ್ತನಲ್ಲಿರುವ ನಿತ್ಯಜೀವ ಎಂದು ಹೇಳುತ್ತದೆ.

2) ಧರ್ಮಶಾಸ್ತ್ರದಿಂದ ಪಾಪದ ಅರಿವು ಉಂಟಾಗುತ್ತದೆ (ರೋಮ. 3:20, 4:15). ಕೃಪೆಗೆ ಅಧೀನರಾದರೆ ಪಾಪದಿಂದ ಬಿಡಿಸುತ್ತದೆ (ರೋಮ. 6:14).

3) ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಕೊಡಲ್ಪಟ್ಟಿತು. ಕೃಪೆಯು ಸತ್ಯವು ಕರ್ತನಾದ ಯೇಸುಕ್ರಿಸ್ತನ ಮೂಲಕ ಬಂದವು (ಯೋಹಾ. 1:16–17).

4) ಧರ್ಮಶಾಸ್ತ್ರವು ಪಾಪ ಮಾಡುವವನು ಸಾಯುವನು ಎಂದು ಹೇಳುತ್ತದೆ (ಯೆಹೆ. 18:20). ಕೃಪೆಯು ನನ್ನನ್ನು ನಂಬುವವನು ಎಂದಿಗೂ ಸಾಯುವುದಿಲ್ಲ ಎಂದು ತಿಳಿಸುತ್ತದೆ (ಯೋಹಾ. 11:25–26).

5) ಧರ್ಮಶಾಸ್ತ್ರವು ನಿಮ್ಮ ಹೃದಯವನ್ನು ಮಾರ್ಪಡಿಸಿಕೊಳ್ಳಿ ಎಂದು ತಿಳಿಸುತ್ತದೆ (ಯೆಹೆ. 36:26). ಕೃಪೆಯು ನೂತನ ಹೃದಯ, ನೂತನ ಆತ್ಮ, ನೂತನ ಮನಸ್ಸು, ನೂತನ ಸ್ವಭಾವವನ್ನು ಕೊಡುತ್ತದೆ (ಯೆಹೆ. 35:25–26, ಎಫೆ. 4:22–24).

6) ಧರ್ಮಶಾಸ್ತ್ರವು ಇದನ್ನು ಮಾಡು ಆಗ ಬದುಕುತ್ತಿ ಎಂದು ಹೇಳುತ್ತದೆ (ಯಾಜ. 18:5) ಕೃಪೆಯು ಕರ್ತನಾದ ಯೇಸುಕ್ರಿಸ್ತನನ್ನು ನಂಬು ಆಗ ಬದುಕುತ್ತಿ ಎಂದು ತಿಳಿಸುತ್ತದೆ (ಅ.ಕೃ. 16:31).

7) ಶಾಸ್ತ್ರವನ್ನು ಮಾಡದೇ ಇರುವವನು, ಕೈಗೊಳ್ಳದೇ ಇರುವವನು ಶಾಪಗ್ರಸ್ತನು ಎಂದು ಹೇಳುತ್ತದೆ (ಧರ್ಮೋ. 27:26). ಕೃಪೆಯು ಶಾಪದಿಂದ ನಮ್ಮನ್ನು ಬಿಡುಗಡೆ ಮಾಡಿತು ಅಂಥ ಹೇಳುತ್ತದೆ (ಗಲಾ. 3:13–14).

8) ಧರ್ಮಶಾಸ್ತ್ರವು ಮನುಷ್ಯನು ದೇವರಿಗಾಗಿ ಏನೇನು ಮಾಡಬೇಕೆಂದು ಹೇಳುತ್ತದೆ (ವಿಮೋ. 20,21,22,23) ಕೃಪೆಯು ಕ್ರಿಸ್ತನು ಮನುಷ್ಯನಿಗಾಗಿ ಏನು ಮಾಡಿದ್ದಾನೆ ಅಂಥ ತಿಳಿಸುತ್ತದೆ (ರೋಮ. 8:31–32, ಎಫೆ. 1:3).

9) ಧರ್ಮಶಾಸ್ತ್ರವು ಅವನನ್ನು ಕ್ಷಮಿಸಬೇಡ ಎಂದು ಹೇಳುತ್ತದೆ (ಧರ್ಮೋ. 19:21). ಕೃಪೆಯು ಅವನನ್ನು ಕ್ಷಮಿಸು ಅಂಥ ಹೇಳುತ್ತದೆ (ಲೂಕ. 23:24).

10) ಧರ್ಮಶಾಸ್ತ್ರವು ಇಸ್ರಾಯೇಲರಿಗೆ ಕೊಡಲ್ಪಟ್ಟಿತು (ರೋಮ. 9:4) ಕೃಪೆಯು ನಂಬುವವರೆಲ್ಲರಿಗೆ ಕೊಡಲ್ಪಟ್ಟಿತು (ಎಫೆ. 2:8).

11) ಧರ್ಮಶಾಸ್ತ್ರವು ನಮ್ಮನ್ನು ಬಿಡುಗಡೆ ಮಾಡಲಿಲ್ಲ (ಇಬ್ರಿ. 10:11) ಕೃಪೆಯು ನಮಗೆ ಬಿಡುಗಡೆ ಮಾಡಿದೆ (ಗಲಾ. 5:1).

12) ಧರ್ಮಶಾಸ್ತ್ರವು ಕನಿಕರವಿಲ್ಲದೆ ಶಿಕ್ಷೆ ವಿಧಿಸುತ್ತದೆ (ಇಬ್ರಿ. 10:28). ಕೃಪೆಯು ಕ್ಷಮಿಸುತ್ತದೆ (ಯೋಹಾ. 8:9–11, ಇಬ್ರಿ. 8:12).

13) ಧರ್ಮಶಾಸ್ತ್ರವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪ್ರೀತಿಸಬೇಕೆಂದು ಹೇಳುತ್ತದೆ (ಧರ್ಮೋ. 6:5). ಕೃಪೆಯು ದೇವರು ಮೊದಲು ನನ್ನನ್ನು ಪ್ರೀತಿಸಿದನು ಎಂದು ತಿಳಿಸುತ್ತದೆ (1 ಯೋಹಾ. 4:10).

14) ಧರ್ಮಶಾಸ್ತ್ರವು ಪ್ರತಿ ಯಜ್ಞಗಳಿಂದ ಪ್ರತಿ ವರುಷವೂ ಪಾಪಗಳನ್ನು ಜ್ಞಾಪಕಕ್ಕೆ ತರುತ್ತದೆ (ಯಾಜ. 5:14). ಕೃಪೆಯು ನಮ್ಮ ಪಾಪಗಳನ್ನು ಎಂದಿಗೂ ಜ್ಞಾಪಕಕ್ಕೆ ತರುವುದಿಲ್ಲ (ಇಬ್ರಿ. 8:12, 10:3, 17).

15) ಧರ್ಮಶಾಸ್ತ್ರವು ಒಬ್ಬ ಮನುಷ್ಯನಾದ ಆದಾಮನ ಸಂಬಂಧದಿಂದ ಮರಣ ಬಂತು ಎಂದು ತಿಳಿಸುತ್ತದೆ (1 ಕೊರಿ. 15:22). ಕೃಪೆ ಒಬ್ಬ ಮನುಷ್ಯನಾದ ಕ್ರಿಸ್ತನ ಸಂಬಂಧದಿಂದ ಜೀವ ಬಂತು ಎಂದು ತಿಳಿಸುತ್ತದೆ (1 ಕೊರಿ. 15:22).

**ದೇವರ ವಾಕ್ಯವನ್ನು ನಾವು ಯಾಕೆ ಅಭ್ಯಾಸ ಮಾಡಬೇಕು :–**

1) ಸ್ವತ: ಅನುಸರಿಸಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಎಜ್ರ. 7:10).

2) ಬೇರೆಯವರಿಗೆ ಕಲಿಸಿ ಕೊಡುವುದಕೋಸ್ಕರ ದೇವರ ವಾಕ್ಯವನ್ನು ಅಭ್ಯಾಸ ಮಾಡಿಕೊಳ್ಳಬೇಕು (ಎಜ್ರ. 7:10).

3) ಜ್ಞಾನೋದಯಕ್ಕಾಗಿ, ತಿಳಿದುಕೊಳ್ಳುವುದಕ್ಕಾಗಿ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:130).

4) ಮಕ್ಕಳಿಗೆ ಕಲಿಸಿ ಕೊಡಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಧರ್ಮೋ. 6:6–7).

5) ಫಲದಾಯಕ ಜೀವಿತಕ್ಕಾಗಿ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 1:1–3).

6) ದುರ್ಭೋಧಕರ ಮತ್ತು ದುರ್ಜನರ ವಂಚನೆ ಮತ್ತು ಕುಯುಕ್ತಿಯಲ್ಲಿ ಸಿಕ್ಕಿಕೊಳ್ಳದಿರಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಎಫೆ. 4:14–16).

7) ಸಫಲತೆ ಸಿಗಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಯೆಹೋ. 1:5–9).

8) ಸೈತಾನನ ತಂತ್ರಗಳನ್ನು ಅರಿತುಕೊಳ್ಳಬೇಕಾದರೆ ದೇವರ

ನಿನ್ನ ರಕ್ಷಣಾನಂದವನ್ನು ನಾನು ತಿರುಗಿ ಅನುಭವಿಸುವಂತೆ ಮಾಡು;
ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು (ಕೀರ್ತ. 51:12).

ವಾಕ್ಯವನ್ನು ಅಭ್ಯಾಸ ಮಾಡಬೇಕು (1 ಕೊರಿ. 2:11).

9) ಆತ್ಮೀಕ ಜೀವಿತದಲ್ಲಿ ಜಾರದೆ ಇರಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 37:31).

10) ನಡತೆಯನ್ನು ಸರಿಪಡಿಸಿಕೊಳ್ಳಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ.119:9).

11) ದೇವರಿಗೆ ವಿರೋಧವಾಗಿ ಪಾಪ ಮಾಡದೆ ಇರಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:11).

12) ಉಪದೇಶವನ್ನು ದೃಢಪಡಿಸಿಕೊಳ್ಳಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಅ.ಕೃ. 17:11).

13) ಸರಿಯಾದ ಮಾರ್ಗದಲ್ಲಿ ನಡೆಯಲು ದೇವರ ವಾಕ್ಯವನ್ನು ಅಭ್ಯಾಸ ಮಾಡಿಕೊಳ್ಳಬೇಕು (ಕೀರ್ತ. 119:105).

14) ಸತ್ಯ ತಿಳಿದುಕೊಳ್ಳಲು ದೇವರ ವಾಕ್ಯ ಅಭ್ಯಾಸ ಮಾಡಬೇಕು (ಯೋಹಾ. 8:31–32).

15) ಆಟಂಕವಿಲ್ಲದ ನಡೆಗಾಗಿ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:45–60).

16) ಮತ್ತೊಬ್ಬರನ್ನು ಸೇವೆಗಾಗಿ ಸಿದ್ಧಪಡಿಸಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (2 ತಿಮೊ. 2:2).

17) ದೇವರನ್ನು ಯಥಾರ್ಥವಾಗಿ ಕೊಂಡಾಡಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:7).

18) ಕೊನೆಯ ದಿನಗಳ ಪ್ರಕಟಣೆ ಹೊಂದಿಕೊಳ್ಳಲು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ದಾನಿ. 9:2).

19) ಉಪಾಧ್ಯಾಯರಿಗಿಂತ ಜ್ಞಾನಿಯಾಗ ಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:99).

20) ಹಿರಿಯರಿಗಿಂತಲೂ ವಿವೇಕಿಯಾಗಬೇಕಾದರೆ ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು (ಕೀರ್ತ. 119:100–104).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ದೇವರು ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ (1 ಯೋಹಾ. 4:16).

# ಅವಿಧೇಯತೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಅವಿಧೇಯತೆ ಹೀನಸ್ಥಿತಿಗೆ ನಡಿಸುತ್ತದೆ :–** (ಕೀರ್ತ. 106:43) ಇಸ್ರಾಯೇಲ್ಯರನ್ನು ದೇವರು ಅನೇಕಾವರ್ತಿ ರಕ್ಷಿಸಿದರೂ ಅವರು ತಮ್ಮ ಆಲೋಚನೆಯನ್ನು ಅನುಸರಿಸಿ ಅವಿಧೇಯರಾದರು. ತಮ್ಮ ಅಕ್ರಮದಿಂದಲೇ ಹೀನಸ್ಥಿತಿಗೆ ಬಂದರು. **"ಒಪ್ಪಿ ವಿಧೇಯರಾದರೆ ದೇಶದ ಮೇಲನ್ನು ಅನುಭವಿಸುವಿರಿ"** (ಯೆಶಾ. 1:19). ಕೆಲವರು ಸಭೆಯಲ್ಲಿ ಚೆನ್ನಾಗಿ ಕುಣಿದು ಆರಾಧಿಸುತ್ತಿದ್ದರೂ ಒಳಗೊಳಗೆ ಸೇವಕರನ್ನು, ಸೇವಕಿಯನ್ನು, ಹಿರಿಯರನ್ನು ದ್ವೇಷಿಸುವುದರಿಂದ ಸ್ಥಿತಿಗೆ ಬದಲಾವಣೆ ಬರದ ಸ್ಥಿತಿಯಲ್ಲಿರುತ್ತಾರೆ. ದಾವೀದನು ದೇವರ ಮಂಜೂಷವನ್ನು ನಾಟ್ಯದಿಂದ, ವಾದ್ಯಗಳೊಂದಿಗೆ ದಾವೀದನೂರಿಗೆ ತರಲು ಬಯಸಿದಾಗ ದಾರಿಯಲ್ಲಿ ಉಜ್ಜನು ಅವಿಧೇಯನಾಗಿ ತನ್ನದಲ್ಲದ ಕಾರ್ಯಕ್ಕೆ ಕೈ ಹಾಕಿ ಸತ್ತು ಬಿದ್ದನು (2 ಸಮು. 6:6–7). ಅರಸನಾದ ಉಜ್ಜೀಯನು ಯಾಜಕರನ್ನು ಧಿಕ್ಕರಿಸಿ ಉದ್ಧಾಟತನದಿಂದ ತಾನೇ ಧೂಪ ಹಾಕುವೆನು ಎಂದು ಹೀನಸ್ಥಿತಿಯನ್ನು ಹೊಂದಿಕೊಂಡನು (2 ಪೂರ್ವ.26:16–20). ಪ್ರವಾದಿನಿಯಾದ ಮಿರ್ಯಾಮಳು ದೇವ ಮನುಷ್ಯನಾದ ಮೋಶೆಗೆ ವಿರುದ್ಧವಾಗಿ ಮಾತನಾಡಿ ಅವಿಧೇಯಳಾಗಿ ತೊನ್ನು ಬರಿಸಿಕೊಂಡಳು (ಅರಣ್ಯ. 12:6–10). ಇಂದು ಸಭೆಗಳಲ್ಲಿ ಎಷ್ಟೋ ಜನರು ದೇವರಿಗೆ ವಿಧೇಯರಾಗಿ ಉನ್ನತ ಸ್ಥಿತಿಗೇರುವರು ಆದರೆ ಎಷ್ಟೋ ಜನರು ದೇವರಿಗೆ ಹಾಗೂ ಸೇವಕರಿಗೆ ಅವಿಧೇಯರಾಗಿ ಆಶೀರ್ವಾದವನ್ನು ಕಳೆದುಕೊಂಡು ಹೀನಸ್ಥಿತಿಗೆ ಬರುವರು. "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ ಅವರಿಗೆ ಅಧೀನರಾಗಿರಿ ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನ ಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ. ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ" (ಇಬ್ರಿ. 13:17).

ಇಸ್ರಾಯೇಲ್ಯರಿಗೆ ದೇವರು ಆಕಾಶದಿಂದ ಮನ್ನ ಸುರಿಸುತ್ತಿದ್ದರೂ ಅವರು ಮಾಂಸಹಾರಕ್ಕಾಗಿ ಆಶೆಪಟ್ಟರು. ದೇವರ ವಿರುದ್ಧವಾಗಿಯೂ, ಮೋಶೆಯ ವಿರುದ್ಧವಾಗಿ ಗುಣಗುಟ್ಟಿದರು. ದೇವರು ಅವರ ಆಶೆಯನ್ನು ಪೂರೈಸಿದರೂ ಪ್ರಾಣಕ್ಕೆ ಕ್ಷಯವನ್ನು ಬರಮಾಡಿದನು (ಕೀರ್ತ.106:13–15). ನಮ್ಮ ಗುಣುಗುಟ್ಟುವಿಕೆಯು ಅವಿಧೇಯತೆಯನ್ನು ಸೂಚಿಸುತ್ತದೆ. **"ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟು ಮಾಡುವವನಾಗಿದ್ದಾನೆ. ಗುಣುಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ"** (ಫಿಲಿ. 2:13–14). ಕ್ರಿಸ್ತನು ತಾನೇ ತಗ್ಗಿಸಿಕೊಂಡು ಶಿಲುಬೆ ಮರಣವನ್ನು ಹೊಂದುವಷ್ಟು ವಿಧೇಯನಾದನು (ಫಿಲಿ. 2:8). ವಿಧೇಯತೆ ತಾನು ಅನುಭವಿಸಿದ ಬಾಧೆಗಳ ಮೂಲಕ ಕಲಿತುಕೊಂಡನು (ಇಬ್ರಿ. 5:8). ದೇವ ಮಗುವೆ ನೀನು ವಿಧೇಯನಾಗುವಿಯಾದರೆ ದೇವರು ನಿನ್ನನ್ನು ಹೀನ ಸ್ಥಿತಿಯಿಂದ ಉನ್ನತ ಸ್ಥಿತಿಗೆ ನಡಿಸುತ್ತಾನೆ.

**ಎಚ್ಚರಿಕೆಯ ಸ್ವರ**

4) **ಅವಿಧೇಯತೆಯು ಪಾಪಕ್ಕೆ ನಡಿಸುತ್ತದೆ :–** (ರೋಮ. 5:19). ಅವಿಧೇಯತೆ ಎಂಬುವುದು ಪಾಪವಾಗಿದೆ. ಅವಿಧೇಯತೆ ನಮ್ಮಲ್ಲಿರುವಾಗ ದೇವರು ನಮ್ಮನ್ನು ಮೆಚ್ಚುವುದಿಲ್ಲ. ಲೂಕ. 18:9–14 ಈ ವಾಕ್ಯ ಭಾಗ ಓದುವಿಯಾದರೆ ಫರಿಸಾಯರಲ್ಲಿ ತಾನೇ ಹೇಳಿಕೊಳ್ಳುವ ಅನೇಕ ಉತ್ತಮ ಗುಣಗಳಿದ್ದವು. ಮೊದಲನೆಯದಾಗಿ ಪ್ರಾರ್ಥನೆ ಮಾಡುವ ವ್ಯಕ್ತಿ ಅವನು ದೇವಾಲಯಕ್ಕೆ ಪ್ರಾರ್ಥಿಸುವುದಕ್ಕೆ ಬಂದು ಪ್ರಾರ್ಥಿಸಿದನು, ಎರಡನೆಯದಾಗಿ ಪ್ರಾರ್ಥನೆ ಮಧ್ಯದಲ್ಲಿ ಸ್ತೋತ್ರ ಮಾಡುತ್ತಿದ್ದನು, ಮೂರನೆಯದಾಗಿ ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತಿದ್ದನು, ನಾಲ್ಕನೆಯದಾಗಿ ದೇವರ ವಾಕ್ಯದಲ್ಲಿರುವ ಪ್ರಕಾರ ಸಂಪಾದಿಸುವ ಎಲ್ಲಾದರಲ್ಲೂ ಹತ್ತರಲ್ಲೊಂದು ಪಾಲು ದಶಮಾಂಶವನ್ನು ಕೊಡುತ್ತಿದ್ದನು ಆದರೆ ದೇವರಿಗೆ ವಿಧೇಯನಾಗದೆ ಎಲ್ಲವನ್ನು ಮಾಡುತ್ತಿದ್ದನು. ತಾನು ಇತರರಿಗಿಂತ ಶ್ರೇಷ್ಠನೆಂಬ ತನ್ನನ್ನೇ ಹೊಗಳುವ ಜೀವಿತವಾಗಿತ್ತು. ದೇವರು ಅವನ ಪ್ರಾರ್ಥನೆಯನ್ನು ಕೇಳಲಿಲ್ಲ ಆದರೆ ತನ್ನನ್ನು ತಾನೇ ತಗ್ಗಿಸಿಕೊಂಡ ಸುಂಕದವನು ದೇವರ ದೃಷ್ಟಿಯಲ್ಲಿ ನೀತಿವಂತನಾದನು. ದೇವರು ವಿಧೇಯತೆಗೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? (1 ಸಮು. 15:23). ಫರಿಸಾಯನಂತೆ ನಮ್ಮಲ್ಲಿ ಮೇಲಿನ ಎಲ್ಲಾ ಗುಣಗಳು ಇದ್ದರೂ ವಿಧೇಯತೆ ಇಲ್ಲವಾದರೆ ನಾವು ನೀತಿವಂತರಾಗದೆ ಪಾಪಿಗಳಾಗಬೇಕಾಗುವುದಲ್ಲವೇ ಪ್ರಿಯರೇ? "ಯಾಕೆಂದರೆ ನೀತಿ ಸ್ವರೂಪನಾದ ಯೆಹೋವನು ನೀತಿಯನ್ನು ಮೆಚ್ಚುವನಾಗಿದ್ದಾನೆ" (ಕೀರ್ತ. 11:3–7).

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ, ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವನು (ಯೂದ. 1:24).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

ಪಾಪವು ನಿಮ್ಮ ಮೇಲೆ ಅಧಿಕಾರ ನಡೆಸದು, ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ,
ಕೃಪೆಗೆ ಅಧೀನರಾಗಿದ್ದೀರಷ್ಟೆ (ರೋಮ. 6:14).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನನ್ನ ಪ್ರಿಯ ಸಹೋದರ/ಸಹೋದರಿಯರೇ ನೀನು ವಿವಾಹ ವಿಚ್ಛೇದನಕ್ಕಾಗಿ ಕೋರ್ಟಿನಲ್ಲಿ ವ್ಯಾಜ್ಯವನ್ನು ಹಾಕಿರುವುದಾದರೆ ಕರ್ತನ ಬಳಿಯಲ್ಲಿ ಪ್ರಾರ್ಥಿಸಿ ಹಿಂದಕ್ಕೆ ತೆಗೆದು ನಿನ್ನ ಸಂಗಾತಿಯೊಂದಿಗೆ ಒಂದಾಗಲು ಪ್ರಯತ್ನಿಸು. ಒಂದು ವೇಳೆ ನೀನು ಈಗಾಗಲೇ ವಿವಾಹ ವಿಚ್ಛೇದನಕ್ಕಾಗಿ ಯೋಚಿಸಿರುವುದಾದರೆ ನಿನ್ನ ಮನಸ್ಸನ್ನು ಈ ವಿಷಯದಲ್ಲಿ ಬದಲಾಯಿಸಿ ಮುಂದುವರಿಯಬೇಡ ಕರ್ತನು ಎಲ್ಲವನ್ನು ಮಾಡಲು ಶಕ್ತನಾಗಿದ್ದಾನೆ. ಯೆಶಾ. 41:21 ಯಾಕೋಬ್ಯರ ಅರಸನಾದ ಯೆಹೋವನು ಹೀಗೆನ್ನುತ್ತಾನೆ, ನಿಮ್ಮ ವ್ಯಾಜ್ಯವು ಈಚೆಗೆ ಬರಲಿ, ನಿಮ್ಮ ಬಲವಾದ ನ್ಯಾಯಗಳನ್ನು ತೋರ್ಪಡಿಸಿರಿ.

# ಮಹಿಳೆಯರ ಸ್ವರ

ಯಾರು ದಾಂಪತ್ಯ ಧರ್ಮದಿಂದ ಬಿಡುಗಡೆ ಹೊಂದಬಹುದು ಈ ವಿಷಯದಲ್ಲಿ ಸತ್ಯವೇದ ಏನು ಹೇಳುತ್ತದೆ ನೋಡೋಣ?

1) **ವಿಧವೆ ಅಥವಾ ವಿಧುರ** (ಗಂಡ ಸತ್ತವಳು ಅಥವಾ ಹೆಂಡತಿ ಸತ್ತವನು) : "ಗಂಡನು ಜೀವದಿಂದಿರುವ ತನಕ ಹೆಂಡತಿಯು ನ್ಯಾಯದ ಪ್ರಕಾರ ಅವನಿಗೆ ಬದ್ಧಳಾಗಿರುವಳು; ಗಂಡನು ಸತ್ತರೆ ಗಂಡನ ಹಂಗು ಆಕೆಗೆ ತಪ್ಪುವುದು. ಹೀಗಿರಲಾಗಿ ಗಂಡನು ಜೀವದಿಂದಿರುವಾಗ ಆಕೆ ಬೇರೊಬ್ಬನನ್ನು ಸೇರಿದರೆ ವ್ಯಭಿಚಾರಿಣಿ ಎಣಿಸಿಕೊಳ್ಳುವಳು. ಆದರೆ ಗಂಡನು ಸತ್ತ ಮೇಲೆ ಅವನ ಹಂಗು ತಪ್ಪಿದ್ದರಿಂದ ಆಕೆ ಮತ್ತೊಬ್ಬ ಗಂಡನನ್ನು ಮಾಡಿಕೊಂಡರೂ ವ್ಯಭಿಚಾರಿಣಿಯಲ್ಲ" (ರೋಮ. 7:2–3).

2) **ಕ್ರಿಸ್ತ ನಂಬಿಕೆಯಿಲ್ಲದವರು ಅಗಲಿದರೆ ಒಬ್ಬ ವಿಶ್ವಾಸಿ ಜವಾಬ್ದಾರನಲ್ಲ** : "ಆದರೆ ಕ್ರಿಸ್ತ ನಂಬಿಕೆಯಿಲ್ಲದವನು ಅಗಲ ಬೇಕೆಂದಿದ್ದರೆ ಅಗಲಿಹೋಗಲಿ; ಇಂಥಾ ಸಂದರ್ಭಗಳಲ್ಲಿ ಕ್ರೈಸ್ತ ಸಹೋದರನಾಗಲಿ ಸಹೋದರಿಯಾಗಲಿ ಬದ್ಧರಲ್ಲ, ಸಮಾಧಾನದಲ್ಲಿರಬೇಕೆಂದು ದೇವರು ನಮ್ಮನ್ನು ಕರೆದಿದ್ದಾನೆ" (1 ಕೊರಿ. 7:15).

3) **ವ್ಯಭಿಚಾರ ಪಾಪ** :– "ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಆಕೆಗೆ ತ್ಯಾಗ ಪತ್ರವನ್ನು ಕೊಡತಕ್ಕದ್ದೆಂದು ಹೇಳಿಯದೆಯಷ್ಟೆ. ಆದರೆ ನಾನು ನಿಮಗೆ ಹೇಳುವುದೇ ನಂದರೆ ಹಾದರದ ಕಾರಣದಿಂದಲ್ಲದೇ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳು ವ್ಯಭಿಚಾರ ಮಾಡುವದಕ್ಕೆ ಕಾರಣನಾಗುತ್ತಾನೆ ಮತ್ತು ಗಂಡ ಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗಿದ್ದಾನೆ" (ಮತ್ತಾ. 5:31–32).

ಮೇಲಿನ ವಚನಗಳಿಂದ ನಾವು ಮೂರು ಕಾರಣಗಳು ಪರಸ್ಪರ ದಂಪತಿಗಳು ಅನುಸರಿಸುವದಕ್ಕೆ ಅನೇಕ ಕಾರಣಗಳಿದ್ದರೂ ಮತ್ತಾ, 19:3ರ ಫರಿಸಾಯರ ಪ್ರಶ್ನೆ ಆಗ ಫರಿಸಾಯರು ಆತನ ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ ಒಬ್ಬನು ಯಾವದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ ಹೇಗೆ ಎಂದು ಕೇಳಿದ್ದಕ್ಕೆ ಕರ್ತನಾದ ಯೇಸು ಕ್ರಿಸ್ತನು ಉತ್ತರವಾಗಿ "ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ. ಆದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಅಂದನು" (ಮತ್ತಾ. 19:6). "ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳುವವನು ತನ್ನ ಹೆಂಡತಿಗೆ ದ್ರೋಹಿಯಾಗಿ ವ್ಯಭಿಚಾರ ಮಾಡಿದವನಾಗಿದ್ದಾನೆ; ಮತ್ತು ಹೆಂಡತಿಯು ತನ್ನ ಗಂಡನನ್ನು ಬಿಟ್ಟು ಬೇರೊಬ್ಬನನ್ನು ಮದುವೆ ಮಾಡಿಕೊಂಡರೆ ಅವಳು ವ್ಯಭಿಚಾರ ಮಾಡಿದವಳಾಗಿದ್ದಾನೆ ಎಂದು ಹೇಳಿದನು" (ಮಾರ್ಕ. 10:11–12). "ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನೆಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು; ಒಂದು ವೇಳೆ ಅಗಲಿದರೂ ಪುರುಷ ಸಹವಾಸವಿಲ್ಲದೆ ಇರಬೇಕು, ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು; ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು" (1 ಕೊರಿ. 7:10–11).

5) **ಕ್ರೈಸ್ತ ವಿಶ್ವಾಸಿಗಳು ವಿವಾಹ ವಿಚ್ಛೇದಿತರನ್ನು ಮದುವೆ ಯಾಗಬಾರದು** :– ಮೇಲಿನ ವಚನಗಳಲ್ಲಿ ಅದಷ್ಟು ವಿವರಿಸಿರುವುದರಿಂದ ಹೆಚ್ಚು ಈ ವಿಷಯದಲ್ಲಿ ವಿವರಿಸುವುದಿಲ್ಲ. "ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನೆಂದರೆ ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು; ಒಂದು ವೇಳೆ ಅಗಲಿದರೂ ಪುರುಷ ಸಹವಾಸವಿಲ್ಲದೆ ಇರಬೇಕು,

ಆ ದಿನದಲ್ಲಿ ಜನಾಂಗಗಳು ತಮಗೆ ಧ್ವಜ ಪ್ರಾಯನಾಗಿ ನಿಂತಿರುವ ಇಷಯನ ಅಂಕುರದವನನ್ನು ಆಶ್ರಯಿಸುವರು (ಯೆಶಾ. 11:10)

ಇಲ್ಲವೆ ಗಂಡನ ಸಂಗಡ ಸಮಾಧಾನವಾಗಬೇಕು ಮತ್ತು ಗಂಡನು ಹೆಂಡತಿಯನ್ನು ಬಿಡಬಾರದು. (2 ಕೊರಿ. 7:10–11). "ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಆಕೆಗೆ ತ್ಯಾಗ ಪತ್ರವನ್ನು ಕೊಡತಕ್ಕದ್ದೆಂದು ಹೇಳಿಯದೆಯಷ್ಟೆ. ಆದರೆ ನಾನು ನಿಮಗೆ ಹೇಳುವುದೇನಂದರೆ ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ ಮತ್ತು ಗಂಡ ಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ" (ಮತ್ತಾ. 5:31–32).

6) **ಕ್ರೈಸ್ತ ವಿಶ್ವಾಸಿಗಳು ಮದುವೆಯ ಹೊರಗೆ ಅಕ್ರಮ ಸಂಬಂಧ ಇಟ್ಟುಕೊಳ್ಳಬಾರದು** :– ಸತ್ಯವೇದವು ಪಾಪದ ಕುರಿತು ಎಚ್ಚರಿಕೆಯನ್ನು ಪರಿಶುದ್ಧತೆಯ ಕುರಿತು ತಿಳುವಳಿಕೆಯನ್ನು ಕೊಟ್ಟರೂ ಅನೇಕರು ತಪ್ಪಾದ ಸಂಗತಿಗಳಲ್ಲಿ ಬಿದ್ದಿರುವುದನ್ನು ನೋಡುವಾಗ ತುಂಬಾ ದು:ಖವಾಗುತ್ತದೆ. "ಗಂಡ ಹೆಂಡಿರ ಸಂಬಂಧ ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯ ತೀರಿಸುವನೆಂದು ತಿಳುಕೊಳ್ಳಿರಿ" (ಇಬ್ರಿ. 13:3–4). ಪುರುಷರು ಅಗತ್ಯವಿಲ್ಲದೆ ಮಹಿಳೆಯರೊಟ್ಟಿಗೆ ಸಂಬಂಧವಿಟ್ಟು ಕೊಳ್ಳಬಾರದು. ಪರಸ್ತ್ರೀಯು ಮನೆಯಲ್ಲಿ ಒಬ್ಬಂಟಿಗಳಾಗಿರುವಾಗ ಅವಳ ಮನೆಗೆ ಪುರುಷರು ಒಬ್ಬರೇ ಹೋಗಬಾರದು. ಪರಸ್ತ್ರೀಯ ಜೊತೆಯಲ್ಲಿ ದೂರವಾಣಿಯಲ್ಲಿ ಅಗತ್ಯದ ವಿಷಯ ಬಿಟ್ಟು ಬೇರೆನನ್ನು ಮಾತನಾಡಬಾರದು, ಪರಸ್ತ್ರೀಯರ ಜೊತೆಯಲ್ಲಿ ಒಬ್ಬರಾಗಿಯೇ ದೇವರ ಸೇವೆ ಎಂದು ಅಥವಾ ಸಂದರ್ಶನವೆಂದು ಹೋಗಕೂಡದು. ಎಫೆ. 4:27 ಹೇಳುತ್ತದೆ, ಸೈತಾನನಿಗೆ ಅವಕಾಶ ಕೊಡಬೇಡಿರಿ ಎಂದು ಕರ್ತನಾದ ಯೇಸುಕ್ರಿಸ್ತನು ತನ್ನ ಸೇವೆಯಲ್ಲಿ ಸ್ತ್ರೀಯರೊಟ್ಟಿಗೆ ಅಗತ್ಯಕ್ಕೆ ಬಿಟ್ಟು ಹೆಚ್ಚೇನೂ ಮಾತನಾಡುತ್ತಿರಲಿಲ್ಲ. ಯೋಹಾ. 4:27 ಅಷ್ಟರೊಳಗೆ ಆತನ ಶಿಷ್ಯರು ಬಂದು ಆತನು ಒಬ್ಬ ಹೆಂಗಸಿನ ಸಂಗಡ ಮಾತಾಡುತ್ತಿರುವುದನ್ನು ಕಂಡು ಆಶ್ಚರ್ಯಪಟ್ಟರು ಆದರೂ ನಿನಗೆ ಏನು ಬೇಕು? ಆಕೆಯ ಸಂಗಡ ಯಾಕೆ ಮಾತನಾಡುತ್ತೀ? ಎಂದು ಒಬ್ಬರೂ ಕೇಳಲಿಲ್ಲ.

ದು:ಖಕರವಾದ ಸಂಗತಿ ಏನೆಂದರೆ ಅನೇಕ ಕ್ರೈಸ್ತ ವಿಶ್ವಾಸಿಗಳು ಫೋನ್ ಕರೆಗಳ ಮೂಲಕ ಫೇಸ್ ಬುಕ್ ಮೂಲಕ, ಎಸ್.ಎಮ್.ಎಸ್‌ಗಳ ಮೂಲಕವಾಗಿ ಪರಸ್ತ್ರೀಯರೊಂದಿಗೆ ಅಕ್ರಮ ಸಂಬಂಧವಿಟ್ಟು ಕೊಂಡಿರುತ್ತಾರೆ. ಇನ್ನು ಕೆಲವರು ಮುಂದುವರಿದು ಪರ ಸ್ತ್ರೀಯರ ಜೊತೆಯಲ್ಲಿ ದೇಹ ಸಂಪರ್ಕ ಕೂಡ ಬೆಳೆಸುತ್ತಾರೆ. ಇವೆಲ್ಲಕ್ಕೂ ನ್ಯಾಯತೀರ್ಪಿನ ದಿನದಲ್ಲಿ ನಾವು ಲೆಕ್ಕ ಕೊಡಬೇಕಾಗಿದೆ ಎಂದು ಮರೆಯಬಾರದು. ಮಾತ್ರವಲ್ಲದೆ ಈ ರೀತಿ ಪಾಪದಲ್ಲಿ ಜೀವಿಸುವ ನಿಮಿತ್ತವಾಗಿ ದೇವರ ಅಪಾರವಾದ ಆಶೀರ್ವಾದಗಳನ್ನು ನಮ್ಮ ಜೀವಿತದಲ್ಲಿ ಕಳೆದುಕೊಳ್ಳುತ್ತೇವೆ.

"ಅಪರಾಧಕ್ಕೆ ವಿಧಿಸಿದ ದಂಡನೆಯು ಕೂಡಲೆ ನಡೆಯದಿರುವ ಕಾರಣ ಅಪರಾಧ ಮಾಡಬೇಕೆಂಬ ಯೋಚನೆಯು ನರಜನ್ಮದವರ ಹೃದಯದಲ್ಲಿ ತುಂಬಿ ತುಳುಕುವುದು" (ಪ್ರಸ. 8:11). ದೇವರು ಪಶ್ಚಾತ್ತಾಪ ಪಡುವುದಕ್ಕೂ, ಪುನರ್‌ಸ್ಥಾಪನೆ ಹೊಂದುವುದಕ್ಕೂ ನಮಗೆ ಕರೆ ಕೊಡುತ್ತಿದ್ದಾನೆ.

7) **ಕ್ರೈಸ್ತ ವಿಶ್ವಾಸಿಗಳು ಆಸ್ತಿಗಾಗಿ, ಹಣಕ್ಕಾಗಿ, ವರದಕ್ಷಿಣಗಾಗಿ ಮದುವೆಯಾಗಬಾರದು** :– ಇಂದು ಮದುವೆ ಎಂಬುದು ಅನೇಕ ಕ್ರೈಸ್ತ ಸಭೆಗಳಲ್ಲಿ ವ್ಯಾಪಾರದ ವಸ್ತುವಾಗಿ ಬಿಟ್ಟಿದೆ. ಮದುವೆಯ ಬಗ್ಗೆ ಜ್ಞಾನವಿಲ್ಲದವರು ಈ ರೀತಿ ತಪ್ಪಾಗಿ ನಡೆದುಕೊಳ್ಳುತ್ತಾರೆ. ಮದುವೆಯಾಗುವಂಥ ಹುಡುಗ ಹುಡುಗಿ ಅನುಕೂಲಸ್ಥಳಾ, ಹುಡುಗಿಗೆ ಸ್ವಂತ ವಾಹನ ಇದೆಯಾ, ಹುಡುಗಿಯ ಮನೆಯವರು ಎಷ್ಟು ಹಣ ಮತ್ತು ಏನೇನು ವಸ್ತುಗಳನ್ನು ಕೊಡುತ್ತಾರೆ, ಎಷ್ಟು ಬಂಗಾರ ಹಾಕುತ್ತಾರೆ, ಇನ್ನು ಹುಡುಗಿ ಕೂಡ ಮದುವೆಯಾಗುವಂಥ ಹುಡುಗ ಅನುಕೂಲಸ್ಥನಾ, ಅವನಿಗೆ ಎಷ್ಟು ಆಸ್ತಿ ಇದೆ, ಎಷ್ಟು ಹಣ ಇದೆ, ಸ್ವಂತ ವಾಹನ ಇದೆಯಾ ಹೀಗೆ ಹೊರಗಿನ ತೋರಿಕೆಯನ್ನು ಮಾತ್ರ ನೋಡುವಂತಹ ಸ್ತ್ರೀ ಪುರುಷರನ್ನು ಇಂದಿನ ದಿನಗಳಲ್ಲಿ ನೋಡಬಹುದು. ನಾನು ಮದುವೆಯಾಗುವಾಗ ನನ್ನ ತಾಯಿಯವರು ನನ್ನ ಪತಿಯ ಬಳಿ ನಿಮ್ಮ ಡಿಮ್ಯಾಂಡ್ ಏನಾದರೂ ಇದೆಯಾ ಎಂದು ಕೇಳಿದರು ಅದಕ್ಕೆ ನನ್ನ ಪತಿಯವರು ಹುಡುಗಿ ಹಾಕಿದ ಬಟ್ಟೆಯಲ್ಲೇ ಬರಲಿ ಅದೇ ನನ್ನ ಡಿಮ್ಯಾಂಡ್ ಎಂದು ಹೇಳಿದರು. ಮದುವೆಯಾಗುವಂತಹ ಹುಡುಗಿಯನ್ನು ಸಾಕಲು ಸಾಧ್ಯವಿಲ್ಲದವರು ಮದುವೆಯಾಗಬಾರದು.

ಕೆಲವು ವರ್ಷಗಳ ಹಿಂದೆ ನಮ್ಮ ಸಭೆಯಲ್ಲಿರುವ ಹುಡುಗಿಯನ್ನು ನೋಡಲು ಒಬ್ಬ ದೇವ ಸೇವಕರು ಶಿವಮೊಗ್ಗ ಕಡೆಯಿಂದ ಬಂದರು ಹುಡುಗಿ ಅವರಿಗೂ ಇಷ್ಟವಾದಳು, ಹುಡುಗಿಗೂ ಅವರು ಇಷ್ಟವಾದರು. ನಂತರ ಆ ಸೇವಕರು ನನ್ನ ಬಳಿ ಅವರ ಕೋರಿಕೆಯನ್ನು

ಮುಂದಿಟ್ಟರು ಇಷ್ಟು ಬಂಗಾರ ಅವರು ಹಾಕಬೇಕು, ನಾನು ಬಾಡಿಗೆ ಹಾಲಿನಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ, ಮದುವೆಯಾದ ನಂತರ ಹುಡುಗಿ ಮನೆಯವರು ಪ್ರಾರ್ಥನಾ ಮಂದಿರದ ಬಾಡಿಗೆ ಕೊಡಬೇಕು. ಮದುವೆಯಾದ ನಂತರ ಹುಡುಗಿಯ ಮನೆಯವರು ಪ್ರತಿ ತಿಂಗಳು ಸೇವೆಗೆ ಇಷ್ಟು ಅಂತ ಹಣ ಕೊಡಬೇಕು, ನನಗೆ ಒಂದು ವಾಹನಬೇಕು, ಇದನ್ನು ಕೇಳಿದ ನನಗೆ ತುಂಬಾ ನೋವಾಯಿತು. ನಾನು ಹೇಳಿದೆ ಒಬ್ಬ ದೇವ ಸೇವಕರಾಗಿ ನೀವೇ ಈ ರೀತಿಯಾಗಿ ನಡೆದರೆ ಸಾಧರಣ ವಿಶ್ವಾಸಿಗಳು ಹೇಗೆ ನಡೆದುಕೊಳ್ಳಬಹುದು ಎಂದು ನಾನೇ ಈ ಮದುವೆ ಬೇಡವೆಂದು ಹೇಳಿದೆ ಇವತ್ತು ಆ ಸಹೋದರಿ ಮೈಸೂರಿನ ಒಬ್ಬ ಒಳ್ಳೇ ದೇವ ಸೇವಕರೊಂದಿಗೆ ಮದುವೆಯಾಗಿ ತನ್ನ ಗಂಡನ ಜೊತೆಯಲ್ಲಿ ಸೇವೆ ಮಾಡುತ್ತಿದ್ದಾಳೆ.

8) **ಕ್ರೈಸ್ತ ವಿಶ್ವಾಸಿಗಳು ತಾನು ರಕ್ಷಣೆ ಹೊಂದಿ ಬಿಟ್ಟು ಬಂದ ಜಾತಿಯ ಹಿನ್ನಲೆಯ ಹುಡುಗ ಹುಡುಗಿ ಬೇಕೆಂದು ಹಟ ಮಾಡಬಾರದು** :- ಕೆಲವು ತಿಂಗಳುಗಳ ಹಿಂದೆ ನನ್ನ ಪತಿಯವರು ದುಬಾಯಿಯಲ್ಲಿ ಒಂದು ಕಡೆ ದೇವರ ವಾಕ್ಯವನ್ನು ಹಂಚುತ್ತಿದ್ದರು ಆರಾಧನೆಯ ನಂತರ ಒಬ್ಬ ಸಹೋದರ ಅವರ ಬಳಿಯಲ್ಲಿ ಬಂದು ಈ ರೀತಿ ಹೇಳಿದರು ನನಗೆ ಮದುವೆಯಾಗಬೇಕು ಆದರೆ ಕೊಂಕಣಿ ಮಾತನಾಡುವ ಹುಡುಗಿಬೇಕು ಎಂದು ಹೇಳಿದರು. ಅದಕ್ಕೆ ನಾನು ಕೇಳಿದೆ? ಯಾಕೆ ನಿಮಗೆ ಕೊಂಕಣಿ ಮಾತನಾಡುವ ಹುಡುಗಿಯೇ ಬೇಕು. ಕರ್ತನ ಸಭೆಯಲ್ಲಿ ಎಲ್ಲಾ ಹಿನ್ನಲೆಗಳಿಂದ ಬಂದಂತಹ ಹುಡುಗಿಯರಿದ್ದರಲ್ಲಾ ಅವರನ್ನು ಯಾರು ಮದುವೆಯಾಗುವುದು ಮತ್ತು ಕ್ರಿಸ್ತನಲ್ಲಿ ಗಲಾ. 3:28 ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನೂ ಎಂದೂ ಆಳು ಒಡೆಯ ಎಂದು ಗಂಡು ಹೆಣ್ಣು ಎಂದು ಬೇಧವಿಲ್ಲ, ಆಗ ಅವರು ಹೇಳಿದರು ಊರಿನಲ್ಲಿ ನನ್ನ ಮನೆಯ ಸುತ್ತ ಮುತ್ತಲೂ 30-40 ಕುಟುಂಬಗಳು ಕೊಂಕಣಿ ಮಾತನಾಡುವವರು ಅವರೆಲ್ಲರೂ ಹೇಳುತ್ತಾರೆ ನೀನು ನಮ್ಮ ಇಚ್ಚೆಗೆ ವಿರುದ್ಧವಾಗಿ ಯೇಸುವನ್ನು ರಕ್ಷಕನೆಂದು ಅಂಗೀಕರಿಸಿದ್ದೀ ಕನಿಷ್ಟ ಪಕ್ಷ ನೀನು ಮದುವೆಯಾಗುವಂತಹ ಹುಡುಗಿಯಾದರೂ ಕೊಂಕಣಿ ಮಾತನಾಡುವವಳು ಬೇಕು ಎಂದು ಹೇಳುತ್ತಾರೆ ಎಂದು ಹೇಳಿದರು.

ಅದಕ್ಕೆ ನನ್ನ ಪತಿಯವರು ಅವರಿಗೆ ಹೇಳಿದರು ಇವತ್ತು ಅವರು ಕೊಂಕಣಿ ಮಾತನಾಡುವ ಹುಡುಗಿ ಅಂಥ ಹೇಳುತ್ತಾರೆ ನಾಳೆ ನಮ್ಮ ಹಾಗೆ ವಿಗ್ರಹವನ್ನು ಆರಾಧಿಸು ಎಂದು ಹೇಳುತ್ತಾರೆ ನೀವು ಒಪ್ಪುವೀರಾ ಎಂದು ಕೇಳಿದರು. ಆದಕಾರಣ ನಾವು ರಕ್ಷಣೆ ಹೊಂದಿದ ನಂತರ ನಮ್ಮ ಜೀವಿತದಲ್ಲಿ ಯಾವುದೇ ಜಾತಿ ಹಿನ್ನಲೆ ಬರಬಾರದು, ನಾವೆಲ್ಲರೂ ಕರ್ತನಾದ ಯೇಸುಕ್ರಿಸ್ತನ ಮಕ್ಕಳಾಗಿದ್ದೇವೆ ಹಾಗೂ ಯಾವುದೇ ಜಾತಿ ಹಿನ್ನಲೆ ನೋಡದೆ ಮದುವೆಯಾಗಲು ಮುಂದೆ ಬರಬೇಕು.

**ಮುಂದುವರಿಯುವದು.........**


ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**




# ನಮ್ಮೊಂದಿಗೆ ಆಚರಿಸಿ





**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.



## ಮಕ್ಕಳ ಸ್ವರ

1. ರೂತಳ ಓರಗಿತ್ತಿಯ ಹೆಸರೇನು ? (ರೂತ. 1:14).
2. ಉಪ್ಪಿನ ಕಂಬವಾದವರು ಯಾರು? (ಆದಿ. 19:6)
3. ಇಷ್ಮಾಯೇಲನಿಗೆ ಜನ್ಮ ನೀಡಿದವರು ಯಾರು ? (ಆದಿ. 16:15).
4. ಪ್ರವಾದಿಯಾದ ಹೋಶೇಯನ ಹೆಂಡತಿಯ ಹೆಸರೇನು? (ಹೋಶೆ. 1:3).
5. ಸಂಸೋನನು ಕತ್ತೆಯ ದವಡೇಯ ಎಲುಬಿನಿಂದ ಎಷ್ಟು ಜನರನ್ನು ವಧಿಸಿದನು? (ನ್ಯಾಯ. 15:16).
6. ಯೆಹೋವನ ಮಾರ್ಗಗಳೆಲ್ಲಾ ಏನಾಗಿದೆ ? (ಕೀರ್ತ. 145:17).
7. ಯೆರೂಸಲೇಮೇ, ಯೆಹೋವನನ್ನು__________ (ಕೀರ್ತ. 147:12).
8. ಅತನು ನಿನ್ನ ಪ್ರಾಂತದೊಳಗೆ __________ ಉಂಟು ಮಾಡುತ್ತಾನೆ (ಕೀರ್ತ. 147:14).
9. ರೊಟ್ಟೀ ತುಂಡುಗಳಂತಿರುವ __________ ಸುರಿಸುತ್ತಾನೆ (ಕೀರ್ತ. 147:17).
10. ಆತನು ತನ್ನ ಪ್ರಜೆಗೋಸ್ಕರ ಏನನ್ನು ಎಬ್ಬಿಸಿದ್ದಾನೆ (ಕೀರ್ತ. 148:14).

**ಮೇ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–**

1. ಬದುಕುವವರೆಲ್ಲರಿಗೂ ಅವಳೇ ಮೂಲಮಾತೆ (ಆದಿ. 3:20).
2. ಸಾರಾ (ಆದಿ. 17:15).
3. ರೆಬೆಕ್ಕಳು (ಆದಿ. 24:67).
4. ಲಾಬಾನನ (ಆದಿ. 29:28).
5. ಹನ್ನಳು (1 ಸಮು. 1:20).
6. ಮೀಕಳು (1 ಸಮು. 18:26).
7. ಚಿಪ್ಪೋರಳು (ವಿಮೋ. 2:21).
8. ಯೋಕೆಬೆದಳು (ವಿಮೋ. 6:20).
9. ಈಜೆಬೆಲಳು (1 ಅರಸು. 19:2).


## ಬೇಕಾಗಿದ್ದಾರೆ

- **ಸ್ಟಾಫ್ ನರ್ಸ್ (ಜಿಎನ್‌ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)**
- **ಎಮ್‌ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**


ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).